ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಏಪ್ರಿಲ್ 24, 2021

ಸಂಪುಟ : 47 ಸಂಚಿಕೆ : 354 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಗೃಹಬಂಧನಕ್ಕೆ ಸಿದ್ಧ

## ವಾರಾಂತ್ಯದ ಕರ್ಫ್ಯೂಗೆ ಶುಕ್ರವಾರವೇ ಸಜ್ಜಾದ ಜನ

## ನಗರದಲ್ಲಿ ಲಗುಬಗೆಯಿಂದ ಅಗತ್ಯ ವಸ್ತುಗಳ ಖರೀದಿ



ದಾವಣಗೆರೆ, ಏ.23- ಶುಕ್ರವಾರ ರಾತ್ರಿಯಿಂದ ಸೋಮವಾರ ಬೆಳಗಿನ ವರೆಗಿನ ಗೃಹಬಂಧನಕ್ಕೆ ನಗರದ ಜನತೆ ಶುಕ್ರವಾರವೇ ಸಜ್ಜಾಗುತ್ತಿದ್ದುದು ಕಂಡು ಬಂತು.

ನಗರದ ಪ್ರಮುಖ ರಸ್ತೆ ಹಾಗೂ ಮಾರುಕಟ್ಟೆಗಳ ಅಂಗಡಿಗಳಲ್ಲಿ ದಿನಸಿ, ಹಣ್ಣು-ತರಕಾರಿ, ಔಷಧ ಮತ್ತಿತರೆ ಅಗತ್ಯ ವಸ್ತುಗಳನ್ನು ಜನತೆ ತರಾತುರಿಯಲ್ಲಿ ಖರೀದಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಕೊರೊನಾ ಮಾರ್ಗಸೂಚಿಯಂತೆ ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿದ್ದರೂ ರಸ್ತೆಗಳಲ್ಲಿ ಜನರ ಓಡಾಟ ಪ್ರತಿದಿನ ಇರುವಂತೆಯೇ ಇತ್ತು.

ರೈತಾಪಿ ವರ್ಗ ಕೃಷಿ ಚಟುವಟಿಕೆಗೆ ಬೇಕಾದ ಪೈಪ್‌ಗಳು, ತಾಡಪಾಲುಗಳು, ಮೋಟಾರ್‌ಗಳನ್ನು ಖರೀದಿಸಿ, ಟ್ರ್ಯಾಕ್ಟರ್‌ಗಳಲ್ಲಿ ತೆಗೆದುಕೊಂಡು ಹೋಗುತ್ತಿದ್ದುದು ಕಂಡು ಬಂತು.

**ಅಂಗಡಿಗಳು ಬಂದ್:** ನಗರದ ಹಳೆ ಭಾಗದ ಗಡಿಯಾರ ಕಂಬ, ಮಂಡಿಪೇಟೆ, ಚೌಕಿಪೇಟೆ, ಕಾಯಿಪೇಟೆ, ಕಾಳಿಕಾದೇವಿ ರಸ್ತೆ, ವಿಜಯಲಕ್ಷ್ಮಿ ರಸ್ತೆ, ಹೊಸ ಭಾಗದಲ್ಲಿರುವ ಜಯದೇವ ವೃತ್ತ, ಅಶೋಕ ರಸ್ತೆ, ಎವಿಕೆ ರಸ್ತೆಗಳಲ್ಲಿನ ಬಹುತೇಕ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಸರ್ಕಾರದ ಕೊರೊನಾ ಮಾರ್ಗಸೂಚಿಯಲ್ಲಿ ಅವಕಾಶ ನೀಡಲ್ಪಟ್ಟಿದ್ದ ಅಂಗಡಿಗಳು ಮಾತ್ರ ತೆರೆದಿದ್ದವು.

ಸಂಜೆಯಾಗುತ್ತಲೇ ಮುಖ್ಯ ರಸ್ತೆಗಳು ಖಾಲಿಯಾಗತೊಡಗಿದವು. ಇತ್ತ ಬಡಾವಣೆಗಳಲ್ಲಿನ ತರಕಾರಿ, ಹಣ್ಣು, ದಿನಸಿ ಅಂಗಡಿಗಳು ಗ್ರಾಹಕರಿಂದ ತುಂಬಿದ್ದವು. ಹಿಟ್ಟಿನ ಗಿರಣಿ ಅಂಗಡಿಗಳಲ್ಲೂ ಜನರ ಸಂಖ್ಯೆ ಹೆಚ್ಚಾಗಿತ್ತು. ಪೆಟ್ರೋಲ್ ಬಂಕ್‌ಗಳಲ್ಲೂ ಜನರು ನಾ ಮುಂದು ತಾ ಮುಂದು ಎಂದು ಪೆಟ್ರೋಲ್‌ಗಾಗಿ ಮುಗಿ ಬಿದ್ದಿದ್ದರು.

9 ಗಂಟೆಯಿಂದ ನೈಟ್ ಕರ್ಫ್ಯೂ ಇದ್ದ ಹಿನ್ನೆಲೆಯಲ್ಲಿ ಕಾರ-ಮಂಡಕ್ಕಿ ಅಂಗಡಿಗಳಲ್ಲಿ ಮಿರ್ಚಿ ಬಾಣಲೆಯಿಂದ ಹೊರ (2ನೇ ಪುಟಕ್ಕೆ)



ದಾವಣಗೆರೆ ಬಕ್ಕೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬೀಗ ಹಾಕಿರುವುದು



ಮಸೀದಿಯೊಂದರ ಮುಂಭಾಗ ಪ್ರವೇಶ ನಿರ್ಬಂಧದ ನಾಮಫಲಕ



ಬೀಗ ಹಾಕಲ್ಪಟ್ಟಿರುವ ನಗರದಲ್ಲಿನ ಒಂದು ಚರ್ಚ್



ಕಾಳಿಕಾ ದೇವಿ ರಸ್ತೆ ಬಿಕೋ ಎನ್ನುತ್ತಿರುವುದು

### ಧಾರ್ಮಿಕ ಸ್ಥಳಗಳು ಬಂದ್

ಕೊರೊನಾ ಮಾರ್ಗಸೂಚಿಯಂತೆ ನಗರದ ಪ್ರಮುಖ ದೇವಾಲಯಗಳು ಬಾಗಿಲು ಮುಚ್ಚಲ್ಪಟ್ಟಿದ್ದವು. ಈ ಹಿನ್ನೆಲೆಯಲ್ಲಿ ಭಕ್ತರು ಮನೆಯಲ್ಲಿಯೇ ದೇವರಿಗೆ ಮೊರೆ ಹೋಗಬೇಕಾಗಿತ್ತು. ಬೆಳಿಗ್ಗೆ ಹಾಗೂ ಸಂಜೆ ದೇವಾಲಯಗಳಲ್ಲಿ ಅರ್ಚಕರಿಂದ ಪೂಜೆ ನೆರವೇರಿತು. ಆದರೆ ಭಕ್ತರ ಪ್ರವೇಶ ನಿಷೇಧಿಸಲಾಗಿತ್ತು. ಬಂದವರು ಹೊರಗಿನಿಂದಲೇ ಕೈ ಮುಗಿದು ತೆರಳುತ್ತಿದ್ದರು. ಇತ್ತ ಮಸೀದಿ ಹಾಗೂ ಚರ್ಚ್‌ಗಳಿಗೂ ಪ್ರವೇಶ ನಿಷೇಧಿಸಲಾಗಿತ್ತು.

# ಆಕ್ಸಿಜನ್ ಪೂರೈಕೆಗೆ ರೈಲ್ವೆ, ವಾಯುಪಡೆ

## ರಾಜ್ಯಗಳು ಜೊತೆಗೂಡಿ ಕಾರ್ಯನಿರ್ವಹಿಸಲು ಪ್ರಧಾನಿ ಮೋದಿ ಕರೆ

**ಕೊರೊನಾ ಹೆಚ್ಚಾಗಿರುವ 11 ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಪ್ರಧಾನಿ ನೋದಿ**

ನವದೆಹಲಿ ಏ. 23 – ಆಕ್ಸಿಜನ್ ಟ್ಯಾಂಕರ್ ಅನ್ನು ತ್ವರಿತವಾಗಿ ಪೂರೈಸಲು ರೈಲ್ವೆ ಹಾಗೂ ವಾಯುಪಡೆ ಬಳಸಲಾಗುವುದು ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ವಿಷಯದಲ್ಲಿ ಎಲ್ಲಾ ರಾಜ್ಯಗಳು ಜೊತೆಯಾಗಿ ಕಾರ್ಯ ನಿರ್ವಹಿಸಬೇಕು ಎಂದಿದ್ದಾರೆ.

ಕೊರೊನಾ ಹೆಚ್ಚಾಗಿರುವ 11 ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಪ್ರಧಾನಿ ಮೋದಿ, ರಾಜ್ಯಗಳು ಒಂದಾಗಿ ಹಾಗೂ ಸಮನ್ವಯದಿಂದ ಪರಸ್ಪರರ ವೈದ್ಯಕೀಯ ಅಗತ್ಯಗಳನ್ನು ಈಡೇರಿಸಲು ಕಾರ್ಯ ನಿರ್ವಹಿಸಬೇಕು. ನಾವು ಒಂದು ದೇಶವಾಗಿ ಕಾರ್ಯ ನಿರ್ವಹಿಸಿದರೆ ಯಾವುದೇ ಸಂಪನ್ಮೂಲದ ಕೊರತೆಯನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳ ಬಹುದು ಎಂದು ಮೋದಿ ಹೇಳಿದ್ದಾರೆ.

ಆಕ್ಸಿಜನ್ ಟ್ಯಾಂಕರ್ ಯಾವುದೇ ಸ್ಥಳಕ್ಕೆ ತೆರಳುವುದಿದ್ದರೂ ಸಹ ಅದನ್ನು ತಡೆಯದಂತೆ ಹಾಗೂ ಅತಂತ್ರವಾಗದಂತೆ ರಾಜ್ಯಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಧಾನಿ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಉಲ್ಬಣಿಸುತ್ತಿರುವ ಆರೋಗ್ಯ ಬಿಕ್ಕಟ್ಟಿನ ನಡುವೆ ಆಕ್ಸಿಜನ್ ಕೊರತೆ ತೀವ್ರವಾಗಿದೆ. ಬೇರೆ ರಾಜ್ಯಗಳಿಗೆ ತೆರಳಬೇಕಿದ್ದ ಆಕ್ಸಿಜನ್ ಟ್ಯಾಂಕ್‌ಗಳನ್ನು ಕೆಲ ರಾಜ್ಯಗಳು ತಡೆದ ಘಟನೆಗಳೂ ವರದಿಯಾಗಿವೆ.

ಆಕ್ಸಿಜನ್ ಟ್ಯಾಂಕರ್‌ಗಳನ್ನು ಸಾಗಿಸುವ ಸಮಯ ಕಡಿಮೆ ಮಾಡಲು ರೈಲ್ವೆ ಹಾಗೂ ವಾಯುಪಡೆಗಳನ್ನು ಬಳಸಲಾಗುತ್ತಿದೆ ಎಂದಿರುವ ಪ್ರಧಾನಿ, ಕೊರೊನಾ ವಿರುದ್ಧ ಹೋರಾಡುವಲ್ಲಿ ಕೇಂದ್ರ ಸರ್ಕಾರ ಪೂರ್ಣ ಸಹಕಾರ ನೀಡಲಿದೆ ಎಂದಿದ್ದಾರೆ. ಕೊರೊನಾ ಪರಿಸ್ಥಿತಿಯ ಕುರಿತು ಕಳೆದ ಐದು ವಾರಗಳಲ್ಲಿ ಪ್ರಧಾನಿ (2ನೇ ಪುಟಕ್ಕೆ)

# ವಿರಾರ್ ಆಸ್ಪತ್ರೆಯಲ್ಲಿ ಬೆಂಕಿ 13 ಕೊರೊನಾ ಸೋಂಕಿತರ ಸಾವು

ವಿರಾರ್ (ಮಹಾರಾಷ್ಟ್ರ), ಏ. 23 – ಮಹಾರಾಷ್ಟ್ರದ ಪಾಲ್ಘಾರ್ ಜಿಲ್ಲೆಯಲ್ಲಿರುವ ಖಾಸಗಿ ಆಸ್ಪತ್ರೆಯ ಐ.ಸಿ.ಯು. ಘಟಕದಲ್ಲಿ ಬೆಂಕಿ ಕಾಣಿಸಿಕೊಂಡು 13 ಕೊರೊನಾ ರೋಗಿಗಳು ಸಾವನ್ನಪ್ಪಿದ್ದಾರೆ.

ವಿರಾರ್‌ನಲ್ಲಿರುವ ನಾಲ್ಕು ಅಂತಸ್ತಿನ ವಿಜಯ ವಲ್ಲಭ ಆಸ್ಪತ್ರೆಯ ಎರಡನೇ ಮಹಡಿಯಲ್ಲಿರುವ ಐ.ಸಿಯು.ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬೆಳಗಿನ ಜಾವ 3 ಗಂಟೆಗೆ ಬೆಂಕಿ ಕಾಣಿಸಿಕೊಂಡಿದ್ದು, ಅದನ್ನು ಬೆಳಿಗ್ಗೆ 5.20ಕ್ಕೆ ನಂದಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬೆಂಕಿ ಕಾಣಿಸಿಕೊಂಡಾಗ ಐ.ಸಿ.ಯು. ನಲ್ಲಿ 17 ರೋಗಿಗಳಿದ್ದರು. ನಾಲ್ವರನ್ನು ರಕ್ಷಿಸಿ ಇದೇ ಪ್ರದೇಶದಲ್ಲಿರುವ (3ನೇ ಪುಟಕ್ಕೆ)

# ಜಿಲ್ಲೆಯಲ್ಲಿ 200 ಪಾಸಿಟಿವ್, 1266 ಸಕ್ರಿಯ

ದಾವಣಗೆರೆ, ಏ.23- ಜಿಲ್ಲೆಯಲ್ಲಿ ಶುಕ್ರವಾರ 200 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 1266ಕ್ಕೆ ಏರಿಕೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 145, ಹರಿಹರ 14, ಜಗಳೂರು 7, ಚನ್ನಗಿರಿ 15, ಹೊನ್ನಾಳಿ 15 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದೆ. 60 ಜನರು ಸೋಂಕು ಮುಕ್ತ ರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ 24359 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 22829 ಜನರು ಗುಣಮುಖರಾಗಿದ್ದಾರೆ. 264 ಜನ ಸಾವನ್ನಪ್ಪಿದ್ದಾರೆ.

# ಕೃಷಿ ಚಟುವಟಿಕೆಗಳಿಗೆ ಕರ್ಫ್ಯೂ ಅನ್ವಯಿಸದು



ಬೆಂಗಳೂರು, ಏ. 23 - ದೈನಂದಿನ ಕೃಷಿ ಚಟು ವಟಿಕೆಗಳಿಗೆ ಕೃಷಿ ಇಲಾಖೆಗೆ ರಾತ್ರಿ ಕರ್ಫ್ಯೂ, ವಾರಾಂತ್ಯದ ಕರ್ಫ್ಯೂ ಹಾಗೂ ಜನತಾ ಕರ್ಫ್ಯೂ ಅನ್ವಯಿಸುವುದಿಲ್ಲ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಯಾವುದೇ ಅಧಿಕಾರಿಗಳು ರೈತರ ದೈನಂದಿನ (2ನೇ ಪುಟಕ್ಕೆ)

# ಮೇ - ಜೂನ್ ತಿಂಗಳಲ್ಲಿ ಕೇಂದ್ರದಿಂದ ಉಚಿತ ಧಾನ್ಯ

ನವದೆಹಲಿ, ಏ. 23 – ಕೊರೊನಾ ಎರಡನೇ ಅಲೆ ಹಿನ್ನೆಲೆಯಲ್ಲಿ ಬಡವರಿಗೆ ಮೇ ಹಾಗೂ ಜೂನ್ ತಿಂಗಳಲ್ಲಿ ಉಚಿತವಾಗಿ ಆಹಾರ ಧಾನ್ಯ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ನಾವು (3ನೇ ಪುಟಕ್ಕೆ)

# ಶಿವ ಬ್ಯಾಂಕ್ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಐಗೂರು ಚಂದ್ರಶೇಖರ್



ದಾವಣಗೆರೆ,ಏ.23-ಜಿಲ್ಲೆಯ ಸಹಕಾರಿ ಬ್ಯಾಂಕುಗಳಲ್ಲೊಂದಾದ ನಗರದ ಶಿವ ಸಹಕಾರಿ ಬ್ಯಾಂಕಿನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಅದೇ ಬ್ಯಾಂಕಿನ ಉಪಾಧ್ಯಕ್ಷರಾಗಿರುವ ಐಗೂರು ಸಿ. (2ನೇ ಪುಟಕ್ಕೆ)

# ತಹಶೀಲ್ದಾರ್ ಬಿ.ಎನ್. ಗಿರೀಶ್ ಅವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ



ಬೆಂಗಳೂರು, ಏ.23- ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅತ್ಯುನ್ನತ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳಿಗೆ ಕರ್ನಾಟಕ ಸರ್ಕಾರವು ಪ್ರತಿವರ್ಷ ಕೊಡಮಾಡುವ ಸರ್ವೋತ್ತಮ ಸೇವಾ ಪ್ರಶಸ್ತಿಗೆ ದಾವಣಗೆರೆ ತಹಶೀಲ್ದಾರ್ ಬಿ.ಎನ್. (3ನೇ ಪುಟಕ್ಕೆ)


## ಗೋವಿಂದರೆಡ್ಡಿ ಅವರಿಗೆ ಪತ್ನಿ ವಿಯೋಗ

ದಾವಣಗೆರೆ ಜಿಲ್ಲಾ ಪಂಚಾಯಿತಿ
ಮಾಜಿ ಅಧ್ಯಕ್ಷರೂ, ಹರಿಹರ ತಾಲ್ಲೂಕು
ನಂದಿಗಾವಿ ಗ್ರಾಮದ ಹಿರಿಯರೂ ಆದ
ಶ್ರೀ ಎ. ಗೋವಿಂದರೆಡ್ಡಿ
ಅವರ ಧರ್ಮಪತ್ನಿ ಮತ್ತು
ನಂದಿಗಾವಿ ಹಾಲು ಉತ್ಪಾದಕರ
ಮಹಿಳಾ ಸಂಘದ ಸಂಸ್ಥಾಪಕ ಅಧ್ಯಕ್ಷರಾದ
**ಶ್ರೀಮತಿ ಸುಧಾ** ಅವರು
ದಿನಾಂಕ 23.04.2021ರ ಶುಕ್ರವಾರ
ಸಾಯಂಕಾಲ 5.20 ಕ್ಕೆ
ಸ್ವರ್ಗಸ್ಥರಾದರೆಂದು ತಿಳಿಸಲು
ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 63 ವರ್ಷ
ವಯಸ್ಸಾಗಿತ್ತು. ಪತಿ, ಮೂವರು ಪುತ್ರರು,
ಇಬ್ಬರು ಪುತ್ರಿಯರು, ಸೊಸೆಯಂದಿರು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ
ಅಪಾರ ಬಂಧು-ಬಳಗವನ್ನು
ಅಗಲಿರುವ ದಿವಂಗತರ ಪಾರ್ಥಿವ
ಶರೀರದ ಅಂತ್ಯಕ್ರಿಯೆಯನ್ನು
ದಿನಾಂಕ 24.04.2021ರ ಶನಿವಾರ
ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ
ಹರಿಹರ ತಾಲ್ಲೂಕು ನಂದಿಗಾವಿ ಗ್ರಾಮದಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.



**ಶ್ರೀಮತಿ ಸುಧಾ ಅಕ್ಕೇರ ಗೋವಿಂದರೆಡ್ಡಿ**
ಜನನ : 18.12.1958 ನಿಧನ : 23.04.2021

ದುಃಖತಪ್ತ ಕುಟುಂಬ ವರ್ಗ ;
- ಪತಿ : ಶ್ರೀ ಎ. ಗೋವಿಂದರೆಡ್ಡಿ, ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ದಾವಣಗೆರೆ.
- ಶ್ರೀಮತಿ ನಾಗರತ್ನಮ್ಮ, ದಿ|| ಆರ್.ಟಿ. ಕೃಷ್ಣರೆಡ್ಡಿ ಹಾಗೂ ಮಕ್ಕಳು
- ಶ್ರೀಮತಿ ಪವಿತ್ರ ಮತ್ತು ವಿಕಾಸ್ ಎ.ಜಿ. ಹಾಗೂ ಮಕ್ಕಳು
- ಡಾ|| ಅರ್ಪಣಾ ಮತ್ತು ಶ್ರೀಧರ್ ಈದಲ ಹಾಗೂ ಮಕ್ಕಳು (USA)
- ಡಾ|| ಸ್ಮಿತಾ ಮತ್ತು ಡಾ|| ವಿವೇಕ್ ಎ.ಜಿ. ಹಾಗೂ ಮಕ್ಕಳು (AUS)
- ಶ್ರೀಮತಿ ಅಕ್ಷತ ಮತ್ತು ಪ್ರಶಾಂತ್ ವಂಕಲಪಾಟಿ ಹಾಗೂ ಮಕ್ಕಳು (USA)
- ಶ್ರೀಮತಿ ಮಾನಸ ಮತ್ತು ವಿಶಾಲ್ ಎ.ಜಿ. ಹಾಗೂ ಮಕ್ಕಳು (USA)
- ಅಕ್ಕೇರ ಸಹೋದರರು ಹಾಗೂ ಹೊಸವೀರಾಪುರದ ದೊಡ್ಡಯಂಕಣ್ಣನವರ ಬಂಧುಗಳು



## ಹೆಚ್.ಎಂ. ಶಿವಾನಂದಯ್ಯ ನಿಧನ




ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ, ಮಮತಾ ಹಾಗೂ
ನಂದಿನಿ ಉಪಹಾರದ ಹೋಟೆಲ್ ಮಾಲೀಕರಾದ
**ಶ್ರೀ ಹೊನ್ನಾಳಿ ಮಠದ ಹೆಚ್.ಎಂ. ಶಿವಾನಂದಯ್ಯ** ಅವರು
ದಿನಾಂಕ 23.04.2021ರ ಶುಕ್ರವಾರ ರಾತ್ರಿ 8.36ಕ್ಕೆ ನಿಧನರಾದರು. ಮೃತರಿಗೆ
92 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.04.2021ರ ಶನಿವಾರ
ಬೆಳಿಗ್ಗೆ 11 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 90088 98223, 99011 60717



## ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ : 13.10.1936 ನಿಧನ : 24.04.2020

**ಶ್ರೀ ಬೆಳಗಾವಿ ಶಂಕ್ರಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ಶ್ರೇಷ್ಠ ಸಂಸ್ಕಾರ, ಶಿಸ್ತು ಮತ್ತು ಆದರ್ಶ ನಮ್ಮೆಲ್ಲರ ಪಾಲಿಗೆ
ದಾರಿದೀಪವಾಗಿವೆ. ಸದಾ ನಿಮ್ಮ ಪ್ರೀತಿ ಹಾಗೂ ಸ್ಮರಣೆಯಲ್ಲಿರುವ

ಮಕ್ಕಳು, ಸೊಸೆಯಂದಿರು,ಮೊಮ್ಮಕ್ಕಳು ಮತ್ತು
ಬಂಧು-ಮಿತ್ರರು, ಬೆಳಗಾವಿ ವಂಶಸ್ಥರು, ದಾವಣಗೆರೆ.

## ಹರಿಹರ : ತಾಲ್ಲೂಕಿನಲ್ಲಿ 27 ಕೊರೊನಾ ಸೋಂಕಿತರು

ಹರಿಹರ, ಏ.23- ನಗರ ಮತ್ತು ಗ್ರಾಮೀಣ ಪ್ರದೇಶ ಸೇರಿದಂತೆ 27 ಕೊರೊನಾ ರೋಗದ ಪ್ರಕರಣಗಳು ದೃಢಪಟ್ಟಿವೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ಅವರು ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ತಾಲ್ಲೂಕಿನಲ್ಲಿ ಪುರುಷರು 17 ಹಾಗೂ ಮಹಿಳೆಯರು 10 ಜನರಿಗೆ ಕೊರೊನಾ ರೋಗವು ದೃಢಪಟ್ಟಿದ್ದು, ಇಲ್ಲಿಯವರೆಗೆ ತಾಲ್ಲೂಕಿನಲ್ಲಿ ಒಟ್ಟು 127 ಜನರಿಗೆ ಕೊರೊನಾ ರೋಗವು ದೃಢಪಟ್ಟಿದ್ದು, ಇದರಲ್ಲಿ ಕೆಲವರು ಗುಣಮುಖರಾಗಿದ್ದು ಉಳಿದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರು.

ತಾಲ್ಲೂಕಿನಲ್ಲಿ ಕೊರೊನಾ ರೋಗದ ಬಾಧೆ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿರುವುದರಿಂದ ಸರ್ಕಾರದ ಮಾರ್ಗಸೂಚಿ ಅನ್ವಯ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಗರದಲ್ಲಿ ಅಗತ್ಯ ವಸ್ತುಗಳ ಅಂಗಡಿ ಹೊರತುಪಡಿಸಿ, ಉಳಿದ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಲಾಗಿದೆ. ಸಾರ್ವಜನಿಕರು ಅಂತರವನ್ನು ಕಾಯ್ದುಕೊಳ್ಳಬೇಕು, ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸರ್ಕಾರದ ಕಾನೂನು ಪಾಲನೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಒಂದು ವೇಳೆ ಕಾನೂನು ಉಲ್ಲಂಘನೆ ಮಾಡಿದರೆ, ಅಂತಹ ವ್ಯಕ್ತಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಶನಿವಾರ ಮತ್ತು ಭಾನುವಾರ ಎಲ್ಲ ಬಗೆಯ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡುವುದಕ್ಕೆ ಸೂಚನೆ ನೀಡಲಾಗಿದೆ. ಇದಕ್ಕೆ ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಮನೆಯಲ್ಲೇ ಇದ್ದು ಸರ್ಕಾರದ ಆದೇಶವನ್ನು ಪಾಲನೆ ಮಾಡುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

# ಕೋವಿಡ್ ಅಲೆ ಉಲ್ಬಣ: ನಿರ್ಲಕ್ಷ್ಯ ವಹಿಸಿದರೆ ನಿರ್ದಾಕ್ಷಿಣ್ಯ ಕ್ರಮ



ಜಗಳೂರ, ಏ.23- ಕೋವಿಡ್ ಎರಡನೇ ಅಲೆ ಉಲ್ಬಣವಾಗುತ್ತಿದ್ದು, ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಕೆಲಸ ನಿರ್ವಹಿಸಬೇಕು. ನಿರ್ಲಕ್ಷ್ಯ ವಹಿಸಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಎಸ್.ವಿ. ರಾಮಚಂದ್ರ ಖಡಕ್ ಸೂಚನೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಭಾಂಗಣದಲ್ಲಿಂದು ಕೋವಿಡ್ ಉಲ್ಬಣದ ಹಿನ್ನೆಲೆಯಲ್ಲಿ ಅಧಿಕಾರಿಗಳ ತುರ್ತುಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕು ವೈದ್ಯಾಧಿಕಾರಿ ಪ್ರತಿನಿತ್ಯ ಕೋವಿಡ್ ಪಾಸಿಟಿವ್ ಪ್ರಕರಣಗಳ ಬಗ್ಗೆ ಮಾಹಿತಿ ನೀಡಬೇಕು. ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಪೂರಕವಾಗುವ ಸೌಲಭ್ಯಗಳ ಕೊರತೆಯ ಬಗ್ಗೆ ಮಾಹಿತಿ ಕೊಟ್ಟರೆ, ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿ, ಅಗತ್ಯವಿರುವಷ್ಟು ಆಂಬ್ಯುಲೆನ್ಸ್ ಸೇವೆ, ಕೋವಿಡ್ ಚುಚ್ಚುಮದ್ದು, ಮಾಸ್ಕ್, ಸ್ಯಾನಿಟೈಸರ್‌ಗಳನ್ನು ತ್ವರಿತಗತಿಯಲ್ಲಿ ತಲುಪಿಸಲಾಗುವುದು.

ಪಟ್ಟಣದಲ್ಲಿ ಸಂಜೆ 7 ಗಂಟೆಯಿಂದ ಜನದಟ್ಟಣೆ ಸೇರುವ ಮದ್ಯದಂಗಡಿ, ಇತರೆ ಅಂಗಡಿಗಳನ್ನು ಬಾಗಿಲು ಮುಚ್ಚಿಸಬೇಕು. ನಿಯಮ ಉಲ್ಲಂಘಿಸಿದರೆ ಪೊಲೀಸ್ ಇಲಾಖೆ ಜೊತೆಗೂಡಿ ಕಾನೂನು ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು. ಕೇವಲ 40 ವರ್ಷ ಮೇಲ್ಪಟ್ಟವರು ಅಲ್ಲದೆ ಯುವಕರಿಗೂ ಸೋಂಕು ತಗುಲುತ್ತಿದ್ದು, ಕೋವಿಡ್ ಚುಚ್ಚುಮದ್ದು ಹಾಕಿಸಲು ಜಾಗೃತಿ ಮೂಡಿಸಬೇಕು. ಸಭೆ-ಸಮಾರಂಭ, ಜಾತ್ರೆಗಳಿಗೆ ಸರ್ಕಾರದ ಆದೇಶ ಉಲ್ಲಂಘಿಸಿ ಜನ ಸೇರಿದಲ್ಲಿ ಅವಕಾಶ ನಿರಾಕರಿಸಬೇಕು. ಕೂಲಿ ಕಾರ್ಮಿಕರು ಹಸಿವಿನಿಂದ ಬಳಲದಂತೆ ದುಡಿಮೆಗೆ ಹಾಗೂ ಅಗತ್ಯ ವಸ್ತುಗಳ ಪೂರೈಕೆಗೆ ಸರ್ಕಾರ ಅವಕಾಶ ಕಲ್ಪಿಸಿದ್ದು, ರಾತ್ರಿ ಕರ್ಫ್ಯೂಗೆ ಸಾರ್ವಜನಿಕರು ಸಹಕರಿಸಬೇಕು ಎಂದರು.

**ಶಾಸಕ ಎಸ್ ವಿ. ರಾಮಚಂದ್ರ ಅಧಿಕಾರಿಗಳಿಗೆ ಖಡಕ್ ಸೂಚನೆ**

ತಾಲ್ಲೂಕಿನ ಮೆದಗಿನಕೆರೆ ವಸತಿ ಶಾಲೆಯಲ್ಲಿ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲು ಅಗತ್ಯ ಕ್ರಮಕೈಗೊಳ್ಳಲು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಹೇಶ್ ಅವರಿಗೆ ಶಾಸಕರು ಸೂಚನೆ ನೀಡಿದರು.

**ಅಲೆಮಾರಿ ಜನಾಂಗದವರಿಗೆ ಸೂರು:** ಅಲೆಮಾರಿ ಜನಾಂಗದವರಿಗೆ ಸರ್ಕಾರದಿಂದ ಮನೆಗಳು ಮಂಜೂರಾಗಿದ್ದು, ಪಿಡಿಓಗಳು ಪ್ರತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಲೆಮಾರಿ ಕುಟುಂಬಗಳನ್ನು ಗುರುತಿಸಿ ಪಟ್ಟಿ ತಯಾರಿಸಬೇಕು. ಹಣದ ಆಮಿಷ ತೋರದೆ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಹಣ ಪಡೆದಲ್ಲಿ, ಮಧ್ಯವರ್ತಿಗಳಿಗೆ ಅವಕಾಶ ಕೊಟ್ಟಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ತಹಶೀಲ್ದಾರ್ ಡಾ. ನಾಗವೇಣಿ ಮಾಹಿತಿ ನೀಡಿ, ತಾಲ್ಲೂಕಿನಲ್ಲಿ 72 ಪಾಸಿಟಿವ್ ಪ್ರಕರಣಗಳಿದ್ದು, 46 ಸಕ್ರಿಯವಾಗಿವೆ. ಈಗಾಗಲೇ ಧಾರ್ಮಿಕ ಮುಖಂಡರುಗಳ ಜಾಗೃತಿ ಸಭೆ ನಡೆಸಿ, ಮಸೀದಿಗಳಲ್ಲಿ, ದೇವಸ್ಥಾನಗಳಲ್ಲಿ ಪೂಜೆ, ಪ್ರಾರ್ಥನೆ ಸಲ್ಲಿಸಲು ಸಾಮೂಹಿಕವಾಗಿ ಸೇರದಂತೆ ತಿಳಿಸಲಾಗಿದೆ. ಅಲ್ಲದೆ ಪಟ್ಟಣದಲ್ಲಿ ಅಗತ್ಯ ಅಂಗಡಿಗಳನ್ನು ಹೊರತುಪಡಿಸಿ, ಉಳಿದಂತೆ ರಾತ್ರಿ 8.30ಕ್ಕೆ ಸಂಪೂರ್ಣ ಬಂದ್ ಮಾಡಲು ವರ್ತಕರಿಗೆ ತಿಳಿಸಲಾಗಿದೆ ಎಂದರು.

ತಾ.ಪಂ. ಇಒ ಮಲ್ಲಾನಾಯ್ಕ ಮಾತನಾಡಿ, ಗ್ರಾಮ ಪಂಚಾಯ್ತಿಯಲ್ಲಿನ 15ನೇ ಹಣಕಾಸಿನಲ್ಲಿ ಶೇ.10 ಚರಂಡಿ ಸ್ವಚ್ಛತೆ, ಬ್ಲೀಚಿಂಗ್ ಪೌಡರ್ ಹಾಗೂ ನೈರ್ಮಲ್ಯ ಕಾಪಾಡಬೇಕು. ಪಿಡಿಓಗಳು ಕರ್ತವ್ಯ ನಿರತರಾಗಿ ಸಂಪರ್ಕದಲ್ಲಿರಬೇಕು. ಫೋನ್ ಸ್ವಿಚ್ ಆಫ್ ಮಾಡಿದರೆ, ನಿರ್ಲಕ್ಷದಿಂದ ಸಮಸ್ಯೆ ಉಂಟಾದರೆ ಅಮಾನತ್ತು ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪ.ಪಂ. ಮುಖ್ಯಾಧಿಕಾರಿ ರಾಜು ಡಿ. ಬಣಕಾರ್, ಪೊಲೀಸ್ ವೃತ್ತ ನಿರೀಕ್ಷಕ ಮಂಜುನಾಥ್ ಪಂಡಿತ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಟಿಎಚ್ಓ ಡಾ. ನಾಗರಾಜ್, ಡಾ. ಮಲ್ಲಪ್ಪ, ಲೋಕೋಪಯೋಗಿ ಇಲಾಖೆ ಎಇಇ ರುದ್ರಪ್ಪ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್.'ಬಿ' ಬ್ಲಾಕ್‌ನಲ್ಲಿ, ರಮಾನಂದ ಕಾಂಪೌಂಡ್ ಹತ್ತಿರ
30x50 South, 27x40 East, 40x50 North West Corner, 40x60 East, 30x50 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಅಡುಗೆ, ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಶುದ್ಧ ಸಸ್ಯಹಾರಿ ತಿಂಡಿ, ಊಟ ದೊರೆಯುತ್ತದೆ. ನಿಮ್ಮ ಮನೆಗೇ ತಲುಪಿಸಲಾಗುವುದು. ಕರೆ ಮಾಡಿ.
63635 43487

**ಬಾಡಿಗೆಗೆ ಅಥವಾ ಲೀಸ್‌ಗೆ**
ದಾವಣಗೆರೆಯ ವಿದ್ಯಾನಗರದಲ್ಲಿ ದೇವಸ್ಥಾನ, ಪಾರ್ಕ್ ಹಾಗೂ ಬಸ್ ಸ್ಟಾಪ್‌ಗೆ ಹತ್ತಿರ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ.
No 96322 74557

**ಭದ್ರಾ ನ್ಯಾಚುರಲ್ಸ್**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್, ಮೆಡ್ ಪ್ಲಸ್ ಎದುರಿಗಿರುವ ಭದ್ರಾ ನ್ಯಾಚುರಲ್ಸ್
(ಸಾವಯವ/ ನೈಸರ್ಗಿಕ ಆಹಾರ ದಿನಸಿ ಒಂದೇ ಸೂರಿನಡಿ)
ವ್ಯವಹಾರದ ಸಮಯ : ಬೆಳಿಗ್ಗೆ 10 ರಿಂದ ರಾತ್ರಿ 9ರ ವರೆಗೆ
ಶನಿವಾರ-ಭಾನುವಾರ ಬೆಳಗ್ಗೆ 6 ರಿಂದ 10ರವರೆಗೆ.
ಮಳ್ಳೀಕಟ್ಟೆ ಬಸವರಾಜ್ B.Sc (Agri)
94483 23796, 91646 76826

**ಡ್ರೈವರ್ ಬೇಕಾಗಿದ್ದಾರೆ**
ವೈಕುಂಠಧಾಮಕ್ಕೆ ವ್ಯಾನ್ ಡ್ರೈವರ್ ಕಂ ಶವ ದಹನ ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639 54459

**ಬೀಡಾ ಅಂಗಡಿ ಬಾಡಿಗೆಗೆ ದೊರೆಯುತ್ತದೆ**
ಪಿಸಾಳೆ ಕಾಂಪೌಂಡ್ 1ನೇ ಕ್ರಾಸ್, ಪಿ.ಬಿ. ರಸ್ತೆ, ದಾವಣಗೆರೆ.
97407 40315
90601 65011

**ಹೋಟೆಲ್ ತೆರೆದಿದೆ**
ವಿಜಿ ಬೆಣ್ಣೆ ದೋಸೆ ಹೋಟೆಲ್ ಈಗ ಡೆಂಟಲ್ ಕಾಲೇಜ್ ರಸ್ತೆ ಕಡ್ಲಿ ನರ್ಸಿಂಗ್ ಹೋಮ್ ಎದುರು, ಎಂ.ಸಿ.ಸಿ 'ಬಿ' ಬ್ಲಾಕ್
90607 34025
ಪಾರ್ಸೆಲ್ ಮಾತ್ರ

**ಸೈಟು ಮಾರಾಟಕ್ಕಿದೆ**
ಹಾರ್ಟ್ ಹಾಸ್ಪಿಟಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, 47×60 ಅಡಿ (ಪೂರ್ವ)
ಮೋಹನ್ಸ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ.: 97424 34049

**ಹಿಂದೂ ಅನಕೂಲಸ್ಥ ಯುವಕನಿಗೆ ಯುವತಿ ಬೇಕಾಗಿದೆ. ಬಡವರಿಗೆ ಮೊದಲ ಆದ್ಯತೆ**
73495 44161

**ಸೈಟ್ ಬೇಕಾಗಿದೆ**
ಎಸ್.ಎಸ್ ಲೇಔಟ್‌ನಲ್ಲಿ 5000 Sqft ಜಾಗ ಬೇಕಾಗಿದೆ.
9036281419

**ಸೈಟ್‌ಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ 40x60 ಪಶ್ಚಿಮ, ಎಂ.ಸಿ.ಸಿ 'ಬಿ' ಬ್ಲಾಕ್ 44x60 ಪೂರ್ವ, 40x60 ಪಶ್ಚಿಮ
86181 82332

**ಹಳೆ ತಗಡು ಬೇಕಾಗಿದೆ (ಉಪಯೋಗಿಸಿರುವ)**
Junk Sheet / Cement Sheet
99644 68051 (Whatsapp No)
80730 55886

**ಸಂಸ್ಥೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ವಿದ್ಯಾರ್ಹತೆ :
1) ಎಂ.ಎಸ್‌ಡಬ್ಲ್ಯೂ - 02
2) ಬಿ.ಎ. & ಪಿಯುಸಿ - 02
(ಪುರುಷ/ಮಹಿಳೆಯರು ಬೇಕಾಗಿದ್ದಾರೆ)
ವಿಳಾಸ : #351/1, ಶ್ರೀ ಆದಿಶಕ್ತಿ ಗುಳ್ಳಮ್ಮ ದೇವಸ್ಥಾನದ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.
99168 26093, 79751 99825

**ಮನೆ ಬಾಡಿಗೆಗೆ**
(ಗ್ರೌಂಡ್ ಫ್ಲೋರ್) ಸಿಂಗಲ್ ಬೆಡ್ ರೂಂ, AEH, ಕಾರ್ಪೊರೇಷನ್ ನೀರು ಮತ್ತು ಬೋರ್‌ವೆಲ್ ನೀರಿನ ಸೌಲಭ್ಯವಿರುವ ಸುಸಜ್ಜಿತ ಮನೆ ಜೈನ್ ಲೇಔಟ್ 2ನೇ ಮೇನ್ ಎಂಟ್ರೆನ್ಸ್, ಕುಂದುವಾಡ ರಸ್ತೆ, ದಾವಣಗೆರೆ. ಸಂಪರ್ಕಿಸಿ
99862 26977

**ವಾಹನ ಮಾರಾಟಕ್ಕಿದೆ**
Ruby yard Bangalore
Vehicle : No. KA52 8835, TATA LPT 1109-2013
Ph. : 73383 72876

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಪಿ.ಬಿ. ರೋಡ್, ಸಂಗೊಳ್ಳಿರಾಯಣ್ಣ ಸರ್ಕಲ್ ಹತ್ತಿರ, ಬೋರ್ ನೀರು, ಅಟ್ಯಾಚ್ಡ್ ಬಾತ್ ರೂಂವುಳ್ಳ 15x40 ಅಳತೆಯ ಮಳಿಗೆ ಕಮರ್ಷಿಯಲ್ ಕಾಂಪ್ಲೆಕ್ಸ್/ ಯಾವುದಾದರೂ ವ್ಯಾಪಾರಕ್ಕಾಗಿ/ಆಫೀಸ್/ ಶೋರೂಂಗೆ ಯೋಗ್ಯವಿದ್ದು ಬಾಡಿಗೆಗೆ ಇದೆ.
86601 25491
98453 63900, 95353 96666

**ಮನೆ ಲೀಸ್‌ಗೆ ಇವೆ**
ಫಸ್ಟ್ ಫ್ಲೋರ್ 2BHK ವಿತ್ ಅಟ್ಯಾಚ್ ಹಾಗೂ ಎಲ್ಲಾ ಸೌಲಭ್ಯಗಳಿರುವ ಮತ್ತು ಸೆಕೆಂಡ್ ಫ್ಲೋರ್ 1 BHK ವಿತ್ ಅಟ್ಯಾಚ್ ಸೌಲಭ್ಯಗಳಿರುವ ಹೊಸ ಮನೆಗಳು ಲೀಸ್‌ಗೆ ಇವೆ.
#389/G-54, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನ ಹಿಂಭಾಗ, ಜಯನಗರ 'ಎ' ಬ್ಲಾಕ್, ದಾವಣಗೆರೆ.
ಮೊ: 98447 10844

**ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
ಫೋ. : 63635 52021
96864 62502

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್‌ರಿಡನ್, ಪೇಷೆಂಟ್ಸ್, ಅಂಗವಿಕಲರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.
89711 92936
76250 15036

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಸೈಟು ಮಾರಾಟಕ್ಕಿದೆ**
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದಲ್ಲಿ ಮುಖ್ಯ ರಸ್ತೆಗೆ 55x40 ಅಳತೆಯ ದಕ್ಷಿಣ ಮತ್ತು ಪಶ್ಚಿಮ ರಸ್ತೆ ಇರುವ ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ, 7ನೇ ಕ್ರಾಸ್ ಕಾರ್ನರ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
94483 73997
97318 25700

**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
94496 84768
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ, ಸರ್ವೆ ನಂ.335/A 4-08 ಸೆಂಟ್ಸ್, ಸರ್ವೆ ನಂ.335/B 2-43 ಸೆಂಟ್ಸ್, ಸರ್ವೆ ನಂ.335/1 1-62 ಸೆಂಟ್ಸ್, ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022


## ಕೃಷಿಗೆ ಕರ್ಫ್ಯೂ ಅನ್ವಯಿಸದು

(1ನೇ ಪುಟದಿಂದ) ಕೃಷಿ ಚಟುವಟಿಕೆಗಳಿಗೆ ತೊಂದರೆ ಮಾಡಬಾರದು ಎಂದಿದ್ದಾರೆ.

ಹೂವು, ಹಣ್ಣು, ದವಸ-ಧಾನ್ಯ ಮಾರುಕಟ್ಟೆಗೆ ಸಾಗಿಸಲು ಆರ್.ಟಿ.ಓ ಸೇರಿದಂತೆ ಯಾರೂ ತೊಂದರೆ ಮಾಡಬಾರದು. ಬಿತ್ತನೆ ಕಾರ್ಯಕ್ಕಾಗಿ ಪೊಲೀಸ್ ಆಗಲೀ, ಯಾವುದೇ ಇಲಾಖೆಯಾಗಲೀ ತೊಂದರೆ ಮಾಡಬಾರದು. ಮುಂಗಾರು ಈಗಾಗಲೇ ಪ್ರಾರಂಭವಾಗಿದ್ದು, ರಸಗೊಬ್ಬರ ಅಂಗಡಿಗಳಿಗಾಗಲೀ, ರೈತ ಸಂಪರ್ಕ ಕೇಂದ್ರಗಳಿಗಾಗಲೀ, ಬಿತ್ತನೆ ಕಾರ್ಯಕ್ಕಾಗಲೀ ಯಾರೂ ಸಹ ತೊಂದರೆಯನ್ನುಂಟು ಮಾಡಬಾರದು ಎಂದು ತಿಳಿಸಿದ್ದಾರೆ.

ಕೆಲವು ಕಡೆ ಕೃಷಿ ಪರಿಕರಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿರುವುದು ತಿಳಿದುಬಂದಿರುತ್ತದೆ. ಹೀಗೆ ಮಾಡಿರುವುದು ತಪ್ಪು. ಎಲ್ಲಾ ಇಲಾಖೆಗಳು ಎಲ್ಲಾ ಇಲಾಖಾಧಿಕಾರಿಗಳು ರೈತರ ಕೃಷಿ ಚಟುವಟಿಕೆಗಳಿಗೆ ಸಹಕಾರ ನೀಡಬೇಕು. ಕೃಷಿ ಚಟುವಟಿಕೆಗಳಿಗೆ ಯಾವುದೇ ನಿರ್ಬಂಧ ಹೇರಬಾರದು. ಕೊರೋನಾ ಸುರಕ್ಷತೆ ಸಾಮಾಜಿಕ ಅಂತರದ ಜೊತೆಗೆ ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕೆಂದು ಹೇಳಿದ್ದಾರೆ.

## ಆಕ್ಸಿಜನ್ ಪೂರೈಕೆಗೆ ರೈಲ್ವೆ, ವಾಯುಪಡೆ

(1ನೇ ಪುಟದಿಂದ) ಮೂರನೇ ಬಾರಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆಸಿದ್ದಾರೆ. ಕಳೆದ ಒಂದು ವಾರದಲ್ಲಿ ಆಕ್ಸಿಜನ್ ಲಭ್ಯತೆ ಕುರಿತು ಪ್ರಧಾನಿ ನಾಲ್ಕು ಬಾರಿ ಸಭೆ ನಡೆಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆತಂಕದ ಖರೀದಿಗೆ ಜನರು ಮುಂದಾಗದಂತೆ ಇದೇ ಸಂದರ್ಭದಲ್ಲಿ ಜನತೆಗೆ ಕರೆ ನೀಡಿರುವ ಪ್ರಧಾನಿ, ಸಂಘಟಿತ ಪ್ರಯತ್ನದಿಂದ ಕೊರೊನಾದ ಎರಡನೇ ಅಲೆಯನ್ನು ತಡೆಯಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆಕ್ಸಿಜನ್ ಪೂರೈಕೆ ಕುರಿತು ಹಲವು ರಾಜ್ಯಗಳ ಮುಖ್ಯಮಂತ್ರಿ ಗಳು ವ್ಯಕ್ತಪಡಿಸಿದ ಅಂಶಗಳನ್ನು ಪರಿಗಣಿಸಿದ ಪ್ರಧಾನಿ, ಸಂಬಂಧಿಸಿದ ಎಲ್ಲಾ ಇಲಾಖೆಗಳು ಹಾಗೂ ಸಚಿವಾಲಯಗಳು ಆಕ್ಸಿಜನ್ ಪೂರೈಕೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳುತ್ತಿವೆ. ಕೈಗಾರಿಕಾ ಆಕ್ಸಿಜನ್ ಅನ್ನು ತಕ್ಷಣದ ಬಳಕೆಗೆ ಗರಿಷ್ಠ ಪ್ರಮಾಣದಲ್ಲಿ ರವಾನಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಅಧ್ಯಕ್ಷರಾಗಿ ಐಗೂರು ಚಂದ್ರಶೇಖರ್

(1ನೇ ಪುಟದಿಂದ) ಚಂದ್ರಶೇಖರ್ ಆಯ್ಕೆಯಾಗಿದ್ದಾರೆ. ಬ್ಯಾಂಕಿನ ನಿರ್ದೇಶಕ ಬಿ.ಎಸ್. ಪ್ರಕಾಶ್, ನಿವೃತ್ತ ಪ್ರಧಾನ ವ್ಯವಸ್ಥಾಪಕ ಎಂ.ಜಿ. ರಾಜಶೇಖರಯ್ಯ, ಹಿರಿಯ ನ್ಯಾಯವಾದಿ ಎನ್.ಟಿ. ಮಂಜುನಾಥ್, ಸಹಕಾರ ಸಂಘಗಳ ಇಲಾಖೆಯ ನಿವೃತ್ತ ಜಂಟಿ ನಿಬಂಧಕ ಬಿ. ಕುಬೇರಪ್ಪ ಅವರುಗಳು ಈ ಸಮಿತಿಯ ಸದಸ್ಯರುಗಳಾಗಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದನ್ವಯ 5 ಜನ ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ತನ್ನ ಕಾರ್ಯವನ್ನು ಇಂದು ಸಭೆ ನಡೆಸುವುದರ ಮೂಲಕ ಕಾರ್ಯಾರಂಭ ಮಾಡಿತು.

ಈ ಸಂದರ್ಭದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ನೂತನ ಸಮಿತಿಯ ಅಧ್ಯಕ್ಷ ಐಗೂರು ಚಂದ್ರಶೇಖರ್, ತಮ್ಮ ಅಧ್ಯಕ್ಷತೆಯ ವ್ಯವಸ್ಥಾಪನಾ ಸಮಿತಿಯ ಸಲಹೆ - ಸೂಚನೆಗಳು ಶಿವ ಸಹಕಾರಿ ಬ್ಯಾಂಕಿಗೆ ದಾರಿದೀಪವಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಬ್ಯಾಂಕಿನ ಶಾಖೆಯನ್ನು ಬ್ಯಾಡಗಿಯಲ್ಲಿ ಆರಂಭಿಸಲು ಆರ್.ಬಿ.ಐ. ಅನುಮತಿ ನೀಡಿದ್ದು, ಶೀಘ್ರದಲ್ಲೇ ಬ್ಯಾಡಗಿಯಲ್ಲಿ ಶಾಖೆಯನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಬ್ಯಾಂಕಿನ ವ್ಯವಹಾರದ ಸಮಯವನ್ನು ಇಂದಿನಿಂದ ಅನ್ವಯವಾಗುವಂತೆ ಪ್ರತಿದಿನ ಬೆಳಿಗ್ಗೆ 10.30 ರಿಂದ ಸಂಜೆ 4ರವರೆಗೆ ನಿಗದಿಪಡಿಸಲಾಗಿದ್ದು, ಇದು ಮುಂದಿನ ಆದೇಶದವರೆಗೂ ಇರುತ್ತದೆ ಎಂದು ಅವರು ಹೇಳಿದರು.

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಿರುವ ಬ್ಯಾಂಕಿನ ಸದಸ್ಯರು, ಗ್ರಾಹಕರು, ಠೇವಣಿದಾರರು ಬ್ಯಾಂಕಿನ ಸೇವಾ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವುದರ ಮೂಲಕ ಬ್ಯಾಂಕನ್ನು ಅಭಿವೃದ್ಧಿಪಡಿಸುವಂತೆ ಬ್ಯಾಂಕಿನ ಅಧ್ಯಕ್ಷ ಎಂ.ಬಿ.ಸಂಗಮೇಶ್ವರ ಗೌಡರು ತಿಳಿಸಿದ್ದಾರೆ.

## ಗೃಹಬಂಧನಕ್ಕೆ ಸಿದ್ಧ


(1ನೇ ಪುಟದಿಂದ) ಬರುತ್ತಿದ್ದಂತೆ ಖಾಲಿಯಾಗುತ್ತಿದ್ದವು. ಪ್ರಮುಖ ವೃತ್ತಗಳಲ್ಲಿನ ತಿಂಡಿ ಗಾಡಿಗಳಲ್ಲಿ ಜನತೆ ಗಡಿ ಬಿಡಿಯಿಂದ ಪಾರ್ಸಲ್ ಕಟ್ಟಿಸಿಕೊಂಡು ಹೋಗುತ್ತಿದ್ದರು.

**ಪೊಲೀಸರ ವಾರ್ನಿಂಗ್ :** ನಗರದಲ್ಲಿ ಹೆಚ್ಚಿನ ಜನ ಸೇರಿದಂತೆ ಪೊಲೀಸರು ಗಸ್ತು ತಿರುಗುತ್ತಿದ್ದರು. ಬೆಳಿಗ್ಗೆ ಮಾರುಕಟ್ಟೆಯಲ್ಲಿ ಗಸ್ತು ತಿರುಗುತ್ತಾ ಜನತೆಗೆ ಎಚ್ಚರಿಕೆ ನೀಡುತ್ತಿದ್ದರು. ಸಂಜೆಯೂ ವಾಯುವಿಹಾರ ಮಾಡಲು ಬಂದವರನ್ನು ವಾಪಾಸ್ ಕಳುಹಿಸುತ್ತಿದ್ದರು.

ರಾತ್ರಿ ಕರ್ಫ್ಯೂ ಜೊತೆ ಬಿಗಿ ಕ್ರಮಗಳನ್ನೂ ತೆಗೆದುಕೊಂಡಿದೆ. ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ 6 ರಿಂದ 10ರವರೆಗೆ ಮಾತ್ರ ಅವಕಾಶವಿದೆ. ವಾರಾಂತ್ಯದ ಕರ್ಫ್ಯೂ ವೇಳೆ ಕಾರಣ ಇಲ್ಲದೆ ಜನರು ಹೊರ ಬಂದರೆ ಪೊಲೀಸರು ಬಿಸಿ ಮುಟ್ಟಿಸಲಿದ್ದಾರೆ.

ಜಿಲ್ಲಾದ್ಯಂತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಪ್ರತಿ ತಾಲ್ಲೂಕಿಗೂ ಒಂದೊಂದು ಡಿಎಆರ್ ತುಕಡಿಗಳನ್ನು ನಿಯೋಜಿಸಲಾಗಿದೆ. ಅನಗತ್ಯವಾಗಿ ಅಡ್ಡಾಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಪೊಲೀಸ್ ಇಲಾಖೆ ತಿಳಿಸಿದೆ.

# ಪದಬಂಧಕಾರ ಗೊಡಬನಾಳು ನಾಗರಾಜು ನಿಧನ



ದಾವಣಗೆರೆ,ಏ.23- ಕಾದಂಬರಿಕಾರ ಹಾಗೂ ಪದಬಂಧಕಾರ ಅಜ್ಜಿಮನೆ ಗೊಡಬನಾಳ್ ನಾಗರಾಜ್ ಅವರು ಇಂದು ಮಧ್ಯಾಹ್ನ 3.30ರ ಸಮಯದಲ್ಲಿ ಚಿತ್ರದುರ್ಗ ತಾಲ್ಲೂಕಿನ ಗೊಡಬನಾಳ್ ಗ್ರಾಮದಲ್ಲಿರುವ ಅವರ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 24ರ ಶನಿವಾರ ಸಂಜೆ 4 ಗಂಟೆಗೆ ಗೊಡಬನಾಳ್ ಗ್ರಾಮದಲ್ಲಿರುವ ಅವರ ಸ್ವಂತ ತೋಟದಲ್ಲಿ ನಡೆಯಲಿದೆ.



1992ರಲ್ಲಿ ದಾವಣಗೆರೆಯಲ್ಲಿ ನಡೆದಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ನಿವಾಸದಲ್ಲಿ ಅವರನ್ನು ಭೇಟಿ ಮಾಡಿ, ಸಮ್ಮೇಳನದ ಸ್ವಾಗತ ಸಮಿತಿಯಲ್ಲಿದ್ದ ಡಾ. ಎಂ.ಜಿ. ಈಶ್ವರಪ್ಪ, ಬಾ.ಮ. ಬಸವರಾಜಯ್ಯ ಮತ್ತಿತರರೊಂದಿಗೆ ಗೊಡಬನಾಳ್ ನಾಗರಾಜ್ ಕೂಡಾ ಇರುವುದನ್ನು ಚಿತ್ರದಲ್ಲಿ ಕಾಣಬಹುದು.

ನಾಗರಾಜ್ ಅವರು ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆ ಸಲ್ಲಿಸುವುದರ ಮೂಲಕ ಕೃಷಿಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ವೃತ್ತಿಯಲ್ಲಿ ಲೆಕ್ಕ ಬರೆವ ಗುಮಾಸ್ತರಾಗಿದ್ದ ಗೊಡಬನಾಳ್ ಪ್ರವೃತ್ತಿಯಲ್ಲಿ ಕಥೆ, ಕಾದಂಬರಿ, ಪದಬಂಧ ಬರೆಯುವ ಸಾಹಿತಿಯಾಗಿದ್ದರು. ಅವರು 'ಕಾಲೇಜು ಕನ್ಯೆಯರ ಕೊಲೆ' ಹಾಗೂ 'ಪ್ರೇಮಪತ್ರ' ಎಂಬ ವಿಶಿಷ್ಟ ಕಾದಂಬರಿಗಳನ್ನು ಬರೆದು ಸ್ವತಃ ಪ್ರಕಟಿಸಿದ್ದರು. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪದಬಂಧ ಬರೆಯುವ ಅಂಕಣಕಾರರಾಗಿದ್ದರು.

ಅವರು ರಚಿಸಿದ ಎಸ್.ಎಸ್.ಎಲ್.ಸಿ. ಕನ್ನಡ ಪಠ್ಯ ಆಧಾರಿತ 'ಸಿರಿ ಕನ್ನಡ ಪದಬಂಧ' ಕೃತಿಯನ್ನು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಚಿತ್ರದುರ್ಗದ ರೋಟರಿ ಬಾಲಭವನದಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಲೋಕಾರ್ಪಣೆ ಮಾಡಿದ್ದರು.

ದಾವಣಗೆರೆಯ ಸಾಂಸ್ಕೃತಿಕ ಸಂಸ್ಥೆ ಪ್ರತಿಮಾ ಸಭಾದ ಕೋಶಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ವಿವಿಧ ಸಾಮಾಜಿಕ ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿ ನಾಗರಾಜ್ ಅವರು ಕಾರ್ಯ ನಿರ್ವಹಿಸುತ್ತಿದ್ದರು.

**ಎಂ.ಎಸ್. ವಿಕಾಸ್ ಶ್ರದ್ಧಾಂಜಲಿ :** ಹೆಸರಾಂತ ಪದಬಂಧಕಾರರಾಗಿದ್ದ ನಾಗರಾಜ್ ಗೊಡಬನಾಳ್ ನಿಧನಕ್ಕೆ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಸಂತಾಪ ವ್ಯಕ್ತಪಡಿಸಿದ್ದಾರೆ. ತಮ್ಮ ಪತ್ರಿಕೆಗೆ ಪದಬಂಧವನ್ನು ಬರೆಯುವುದರ ಮೂಲಕ 'ಜನತಾವಾಣಿ' ಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಅವರು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸುತ್ತಿದ್ದ ಸೇವೆ ಸ್ಮರಣೀಯ ಎಂದಿದ್ದಾರೆ.

**ಅಥಣಿ ವೀರಣ್ಣ ಸಂತಾಪ :** ನಾಗರಾಜ್ ಅವರ ನಿಧನಕ್ಕೆ ಹಿರಿಯ ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಸಂತಾಪ ವ್ಯಕ್ತಪಡಿಸಿದ್ದಾರೆ. 1992ರಲ್ಲಿ ನಗರದಲ್ಲಿ ನಡೆದಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕೋಶಾಧ್ಯಕ್ಷರಾಗಿದ್ದ ತಮ್ಮೊಂದಿಗೆ ನಾಗರಾಜ್ ಅವರು ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು ಎಂದು ವೀರಣ್ಣ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ಗಣ್ಯರ ಶೋಕ :** ಗೊಡಬನಾಳ್ ನಾಗರಾಜ್ ಅವರ ನಿಧನಕ್ಕೆ ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ, ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಸಾಹಿತಿಗಳಾದ ಶ್ರೀಮತಿ ಟಿ.ಶೈಲಜಾ, ಆರ್. ಶಿವಕುಮಾರಸ್ವಾಮಿ ಕುರ್ಕಿ, ಎನ್. ನಾಗಲಿಂಗಚಾರ್, ವರ್ತಕ ವೈ.ಜಿ. ರಾಜು ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.

# ನಕಲಿ ಬಂಗಾರ ನೀಡಿ ವಂಚಿಸಿದ್ದ ಆರೋಪಿ ಬಂಧನ



ದಾವಣಗೆರೆ, ಏ.23- ಅಸಲಿ ಬಂಗಾರ ಎಂದು ನಂಬಿಸಿ ನಕಲಿ ಬಂಗಾರ ನೀಡಿ ವಂಚಿಸಿದ್ದ ಆರೋಪಿಯನ್ನು ಬಂಧಿಸಿರುವ ನ್ಯಾಮತಿ ಪೊಲೀಸರು 2 ಲಕ್ಷದ 72 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

ಶಿವಮೊಗ್ಗ ತಾಲ್ಲೂಕು ಹಾಡೋನಹಳ್ಳಿ ಗ್ರಾಮದ ಕೊರಚರ ಕಾಲೋನಿಯ ಬುಟ್ಟಿ ಹೆಣೆಯುವ ಕೆಲಸಗಾರ ಉಲ್ಲಾಸ ಬಂಧಿತನು. ಮತ್ತೋರ್ವ ಆರೋಪಿಯ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಮಾರ್ಚ್ 26, 2021ರಂದು ಬಾಗಲಕೋಟೆ ಜಿಲ್ಲೆ ಇಳಕಲ್ ತಾಲ್ಲೂಕಿನ ಗೋರಬಾಳ ಗ್ರಾಮದ ನೇಕಾರ ಪರಶುರಾಮ ಎಂಬುವರಿಗೆ ಆರೋಪಿಯು ಪದೇ ಪದೇ ಫೋನ್ ಮಾಡಿ ಮನೆಯ ಪಾಯ ತೆಗೆಯುವಾಗ ಬಂಗಾರದ ನಿಧಿ ಸಿಕ್ಕಿದ್ದು, ಅದರಲ್ಲಿ ಅರ್ಧ ಕೆ.ಜಿ. ಬಂಗಾರದ ಬಿಲ್ಲೆಗಳನ್ನು ಮಾರಾಟಕ್ಕೆ ಕೊಡುವುದಾಗಿ ನಂಬಿಸಿ, ಬೇಡವೆಂದರೂ ಬಿಡದೇ ಫೋನ್ ಮಾಡಿ ಹಣದ ತೊಂದರೆ ನೆಪ ಹೇಳಿ 5 ಲಕ್ಷ ರೂ.ಗೆ ಬಂಗಾರದ ಬಿಲ್ಲೆಗಳ ಮಾರಾಟ ಮಾಡುವುದಾಗಿ ತಿಳಿಸಿದ್ದ.

ಆರೋಪಿತನ ಮಾತಿನಂತೆ ಶಿವಮೊಗ್ಗಕ್ಕೆ ಬಂದು ಅಲ್ಲಿಂದ ನ್ಯಾಮತಿ ತಾಲ್ಲೂಕು ಚೀಲೂರು ಗ್ರಾಮಕ್ಕೆ ಬಂದಾಗ, ಪರಿಚಿತನಾಗಿ ತನ್ನ ಬಳಿಯಿದ್ದ ಒಂದು ಗಂಟು ತೋರಿಸಿ ನಮ್ಮ ಮನೆಯ ಪಾಯ ತೆಗೆಯುತ್ತಿದ್ದಾಗ ಸಿಕ್ಕ ನಿಧಿ ಎಂದು ಹೇಳಿ ಒಂದು ಬಿಲ್ಲೆಯನ್ನು ಕೊಟ್ಟು, ಪರೀಕ್ಷಿಸಿಕೊಳ್ಳುವಂತೆಯೂ ನಾಟಕವಾಡಿದ್ದಾನೆ.

**2 ಲಕ್ಷದ 72 ಸಾವಿರ ನಗದು ವಶ**

ಎಲ್ಲಾ ಬಂಗಾರದ ಬಿಲ್ಲೆಗಳನ್ನು ಕೇಳಿದರೂ ನೀಡದೇ ಒಂದು ಬಿಲ್ಲೆ ಕೊಟ್ಟು 1 ಸಾವಿರದ 500 ರೂ. ನಗದು ಪಡೆದಿದ್ದ. ಪರಶುರಾಮ ತನ್ನೂರಿಗೆ ಹೋಗಿ ಪರೀಕ್ಷಿಸಿದಾಗ ಆರೋಪಿತನು ನೀಡಿದ್ದ ಒಂದು ಬಿಲ್ಲೆ ಚಿನ್ನವೇ ಎಂದು ಖಾತ್ರಿಪಡಿಸಿಕೊಂಡರು. ನಂತರ ಆರೋಪಿತನು ಪುನಃ ಫೋನ್ ಮಾಡಿ ತಿಳಿಸಿದಂತೆ ಚೀಲೂರು ಗ್ರಾಮಕ್ಕೆ ಪರಶುರಾಮ ತೆರಳಿದಾಗ, ಅಲ್ಲಿದ್ದ ಆರೋಪಿ ಉಲ್ಲಾಸ ಮತ್ತು ಈತನೊಂದಿಗಿದ್ದ ಮತ್ತೋರ್ವ ಅರ್ಧ ಕೆ.ಜಿ. ತೂಕದಷ್ಟು ಬಿಲ್ಲೆಗಳಿರುವ ಒಂದು ಬಟ್ಟೆಯ ಗಂಟನ್ನು ನೀಡಿ 4 ಲಕ್ಷದ 80 ಸಾವಿರ ನಗದನ್ನು ಪಡೆದು, ಅಲ್ಲಿಂದ ಪರಾರಿಯಾಗಿದ್ದರು.

ನ್ಯಾಮತಿ ಠಾಣೆಯಲ್ಲಿ ವಂಚನೆಗೊಳಗಾದ ಪರಶುರಾಮ ದೂರು ದಾಖಲಿಸಿದ್ದರು. ಈ ಪ್ರಕರಣ ಸಂಬಂಧ ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಹಾಗೂ ಚನ್ನಗಿರಿ ಪೊಲೀಸ್ ಉಪಾಧೀಕ್ಷಕ ಡಾ. ಸಂತೋಷ್ ಮಾರ್ಗದರ್ಶನದಲ್ಲಿ ಹೊನ್ನಾಳಿ ಸಿಪಿಐ ಟಿ.ವಿ. ದೇವರಾಜ ನೇತೃತ್ವದಲ್ಲಿ ರಚಿಸಲಾಗಿದ್ದ ವಿಶೇಷ ತಂಡವು ಇಂದು ಟಿ.ವಿ. ದೇವರಾಜ ನೇತೃತ್ವದಲ್ಲಿ ಪಿಎಸ್ಐ ರಮೇಶ್ ಹಾಗೂ ಸಿಬ್ಬಂದಿಗಳೊಂದಿಗೆ ಹೊಳಲೂರು ಗ್ರಾಮದಲ್ಲಿ ಆರೋಪಿತ ಉಲ್ಲಾಸನನ್ನು ಬಂಧಿಸಿ, ಈತನಿಂದ 2 ಲಕ್ಷದ 72 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.


**ಸುಶೀಲಬಾಯಿ ನಿಧನ**



ದಾವಣಗೆರೆ ಬಿ.ಟಿ.ಲೇಔಟ್, ಕೆ.ಆರ್. ರಸ್ತೆ ನಿವಾಸಿ ಎಲ್. ರಮೇಶ್ ಕುಮಾರ್ ಇವರ ಧರ್ಮಪತ್ನಿ
**ಸುಶೀಲ ಬಾಯಿ**
ಇವರು ದಿನಾಂಕ 23.04.2021ರ ಶುಕ್ರವಾರ ಬೆಳಗಿನ ಜಾವ 6 ಗಂಟೆಗೆ ನಿಧನರಾದರು. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.04.2021ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿತು.
ಇಂತಿ ದುಃಖತಪ್ತ ಕುಟುಂಬ ವರ್ಗ
**ಎಸ್.ಎಲ್.ಕೆ. ಪಾತ್ರೆ ವ್ಯಾಪಾರಿಗಳು**
ಮಂಡಿಪೇಟೆ, ದಾವಣಗೆರೆ.


**ಕೊಕ್ಕನೂರು ಗ್ರಾಮದ ದಾಸರ ಬಸಪ್ಪ**



ಹರಿಹರ ತಾ. ಕೊಕ್ಕನೂರು ಗ್ರಾಮದ ದಾಸರ ಸಣ್ಣ ಬಸಪ್ಪರ ಬಸಪ್ಪ (85) ಇವರು ದಿನಾಂಕ 23.04.2021ರ ಶುಕ್ರವಾರ ಸಂಜೆ 5 ಗಂಟೆಗೆ ನಿಧನರಾದರು. ಪತ್ನಿ, ನಾಲ್ವರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.04.2021 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಕೊಕ್ಕನೂರಿನಲ್ಲಿ ನೆರವೇರಲಿದೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**23ನೇ ಪುಣ್ಯಸ್ಮರಣೆ**



**ಎನ್.ಟಿ. ವಜ್ರಮುನಿ**
ನೀವು ನಮ್ಮನ್ನಗಲಿ ಇಂದಿಗೆ (24.04.2021) 23 ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,
ನಿಬಗೂರು ತಿಪ್ಪೇಸ್ವಾಮಿ ಮತ್ತು ಶ್ರೀಮತಿ ಮುರಿಗೆಮ್ಮ
ಸಹೋದರಿಯರು, ಮಾವಂದಿರು,
ವಿ. ಕೊಟ್ರೇಶ್, ವಿ. ಚೈತ್ರ, ವಿ. ನೇತ್ರ.

## ಪ್ರಯಾಣಿಕರ ಸಂಖ್ಯೆ ಇಳಿಮುಖ

# ಕೆಎಸ್‌ಆರ್‌ಟಿಸಿ ಆದಾಯಕ್ಕೆ ಪೆಟ್ಟು




ದಾವಣಗೆರೆ, ಏ.23- ಕಳೆದ 15 ದಿನಗಳಿಂದ ನೌಕರರು ಕರ್ತವ್ಯಕ್ಕೆ ಹಾಜರಾಗದೇ ಮುಷ್ಕರ ಕೈಗೊಂಡಿದ್ದ ಕಾರಣ ಆದಾಯದಲ್ಲಿ ಇಳಿಕೆ ಕಂಡ ಕೆಎಸ್‌ಆರ್‌ಟಿಸಿಗೆ, ಈಗ ಕೊರೊನಾ 2ನೇ ಅಲೆಯ ಅಬ್ಬರದಿಂದಲೂ ಆದಾಯಕ್ಕೆ ಪೆಟ್ಟು ಬೀಳುವಂತಾಗಿದೆ.

ಈಗಾಗಲೇ ಜಿಲ್ಲೆಯಲ್ಲಿನ 1100 ಜನ ಸಾರಿಗೆ ನೌಕರರು ಮುಷ್ಕರ ಕೈ ಬಿಟ್ಟು ಕೆಲಸಕ್ಕೆ ಹಾಜರಾಗಿದ್ದು, ಇನ್ನೇನು ಆದಾಯದಲ್ಲಿ ಸುಧಾರಿಸಿಕೊಳ್ಳಬಹುದೆಂಬ ಸಮಯದಲ್ಲಿ ಈಗ ಪ್ರಯಾಣಿಕರ ಸಂಖ್ಯೆಯಲ್ಲಿ ಇಳಿಮುಖ ಕಂಡು, ಮತ್ತೊಮ್ಮೆ ಆದಾಯಕ್ಕೆ ಕತ್ತರಿ ಬಿದ್ದಂತಾಗಿದೆ.

ಕೊರೊನಾ 2ನೇ ಅಲೆಯು ಜೋರಾಗಿರುವುದು ಒಂದು ಕಡೆಯಾದರೆ, ಹಗಲು-ರಾತ್ರಿ ಕರ್ಫ್ಯೂ ಕಾರಣ ಕೆಲಸ-ಕಾರ್ಯಗಳಿಗೆ, ವ್ಯಾಪಾರ-ವಹಿವಾಟು ಸೇರಿದಂತೆ ಇತರೆ ಕಾರಣಗಳಿಂದಾಗಿ ನಗರ, ತಾಲ್ಲೂಕು, ಜಿಲ್ಲೆಗಳಿಗೆ ಜನರ ಓಡಾಟ ಕಡಿಮೆಯಾಗಿರುವುದರಿಂದ ಬಸ್ ಗಳ ಪ್ರಯಾಣಿಕರ ಸಂಖ್ಯೆ ಕ್ಷೀಣಿಸಲು ಕಾರಣವೆನ್ನಲಾಗಿದೆ.

ಪ್ರತಿನಿತ್ಯ ದಾವಣಗೆರೆಯಿಂದ ಬೆಂಗಳೂರಿಗೆ ಸುಮಾರು 30 ಬಸ್‌ನಷ್ಟು ಜನರು ಪ್ರಯಾಣಿಸುತ್ತಿದ್ದರು. ಇಂದು ಒಂದು ಬಸ್‌ನಲ್ಲಿ 25 ಜನರು ಪ್ರಯಾಣಿಸುವು ದನ್ನೇ ಕಾಣಲು ಸಾಧ್ಯವಾಗಿಲ್ಲ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ ಹೆಬ್ಬಾಳ್ ತಿಳಿಸಿದರು.

ಬಸ್ ಚಾಲಕ ಸುರೇಶ್ ಹೇಳುವಂತೆ, ಜನರು ಹೆಚ್ಚಾಗಿ ಓಡಾಟ ಮಾಡುತ್ತಿಲ್ಲ. ಈಗಾಗಲೇ ಸರ್ಕಾರ ಹೇಳುವಂತೆ ಶೇ.50ರಷ್ಟು ಪ್ರಯಾಣಿಕರನ್ನು ಕರೆದೊಯ್ಯಬೇಕಾಗಿದೆ. ಅದರಲ್ಲಿ ಅರ್ಧ ಭಾಗದಷ್ಟು ಪ್ರಯಾಣಿಕರು ಬಂದಿಲ್ಲ ಎಂದಿದ್ದಾರೆ.

**ಕೋವಿಡ್ ಪರೀಕ್ಷೆಗೆ ಸೂಚನೆ:** ಈಗ ಎಲ್ಲಾ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಿದ್ದು, ಅವರುಗಳು ಕಳೆದ 15 ದಿನಗಳಿಂದ ಕೆಲಸಕ್ಕೆ ಬಂದಿರಲಿಲ್ಲ. ಹೀಗಾಗಿ, ಮುಂಜಾಗ್ರತಾ ಕ್ರಮವಾಗಿ ಎಲ್ಲಾ ನೌಕರರು ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಬರುವಂತೆ ಸೂಚನೆ ನೀಡಲಾಗಿದೆ ಎಂದು ಸಿದ್ದೇಶ್ ಹೆಬ್ಬಾಳ್ ತಿಳಿಸಿದರು.


## ಎರಡನೇ ಬಾರಿ ಲಸಿಕೆ ಪಡೆದ ಸಾಣೇಹಳ್ಳಿ ಶ್ರೀ



ಸಿರಿಗೆರೆ, ಏ.23 - ಇಲ್ಲಿನ ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುರುವಾರದಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕೋವಿಡ್ ಎರಡನೇ ಲಸಿಕೆ ಹಾಕಿಸಿಕೊಂಡರು.

ಈ ಸಂದರ್ಭದಲ್ಲಿ ಕೋವಿಡ್ ಎರಡನೇ ಅಲೆ ತುಂಬಾ ವ್ಯಾಪಕವಾಗಿ ಹಬ್ಬುತ್ತಲಿದೆ. ಸ್ವಲ್ಪ ದಿನಗಳ ಮಟ್ಟಿಗೆ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸದಿರುವುದು ಕ್ಷೇಮ ಎಂದು ಸಾರ್ವಜನಿಕ ಸಮಾರಂಭಗಳನ್ನೂ ರದ್ದು ಪಡಿಸಿದ್ದೇವೆ ಎಂದು ತಿಳಿಸಿದರು.

# ಹರಿಹರ : ಅಗತ್ಯ ವಸ್ತುಗಳ ಅಂಗಡಿಗಳನ್ನು ಹೊರತುಪಡಿಸಿ ಎಲ್ಲಾ ಬಂದ್




ಹರಿಹರ, ಏ.23- ನಗರದಲ್ಲಿ ಕೊರೊನಾ ದಿನದಿಂದ ದಿನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿರುವುದರಿಂದ ಸರ್ಕಾರದ ಮಾರ್ಗಸೂಚಿ ಅಡಿಯಲ್ಲಿ ಅಗತ್ಯ ವಸ್ತುಗಳ ಅಂಗಡಿಗಳನ್ನು ಹೊರತು ಪಡಿಸಿ, ಉಳಿದೆಲ್ಲಾ ಅಂಗಡಿ ಮುಂಗಟ್ಟು ಗಳನ್ನು ಬಂದ್ ಮಾಡಿಸಲಾಗಿದೆ.

ಇಂದು ದಿನಸಿ ಪದಾರ್ಥಗಳ ಅಂಗಡಿ, ಔಷಧಿ ಮಳಿಗೆಗಳು, ಪೆಟ್ರೋಲ್ ಬಂಕ್, ಹೋಟೆಲ್, ಬೇಕರಿ, ಬಾರ್, ಮಟನ್, ಚಿಕನ್, ಎಳನೀರು, ಹೂವು, ಸರ್ಕಾರಿ ಕಚೇರಿಗಳು, ಗೊಬ್ಬರದ ಅಂಗಡಿಗಳು ಮಾತ್ರ ತೆರೆದುಕೊಂಡು ವ್ಯಾಪಾರ ವಹಿವಾಟು ಮಾಡಿದರೆ, ಬಟ್ಟೆ, ಕಬ್ಬಿಣ-ಸಿಮೆಂಟ್, ಟೈಲರ್, ಬಂಗಾರ, ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್, ಬೀಡಾ, ಹಾರ್ಡ್‌ವೇರ್, ಮೊಬೈಲ್, ಕೈಗಾರಿಕೆ, ಗ್ಯಾರೇಜ್, ಪೇಂಟ್, ಕಟಿಂಗ್, ಪೋಟೋ ಸ್ಟುಡಿಯೋ, ಎಗ್ ರೈಸ್, ಸ್ಟೇಷನರಿ, ಜೆರಾಕ್ಸ್, ಆಟೋಮೊಬೈಲ್ ಸೇರಿದಂತೆ ಹಲವು ಅಂಗಡಿಗಳನ್ನು ಬಂದ್ ಮಾಡಿಸಲಾಗಿದೆ.

ವಿವಿಧ ರೀತಿಯ ಮುಂಜಾಗ್ರತೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ವ್ಯಾಪಾರ, ವಹಿವಾಟು ನಡೆಸುವ ಅಂಗಡಿಗಳಿಗೆ, ವಾಹನ ಚಲಾಯಿಸುವವರಿಗೆ ಅಧಿಕಾರಿಗಳು ದಂಡವನ್ನು ಹಾಕುತ್ತಿದ್ದಾರೆ. ಹೋಟೆಲ್ ಮತ್ತು ಬಾರ್‌ಗಳಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ನೀಡಿರುವುದಿಲ್ಲ. ಮನೆಗಳಿಗೆ ತೆಗೆದುಕೊಂಡು ಹೋಗಬಹುದಾಗಿದೆ. ಎಲ್ಲಾ ಧಾರ್ಮಿಕ ಕೇಂದ್ರಗಳಲ್ಲಿ ಬೆಳಿಗ್ಗೆ, ಸಂಜೆ ನಿತ್ಯ ಪೂಜೆಗೆ ಮಾತ್ರ ಅವಕಾಶ ನೀಡಿದ್ದು, ಸಾರ್ವಜನಿಕರ ದರ್ಶನಕ್ಕೆ ನಿರ್ಬಂಧಗಳನ್ನು ಹೇರಲಾಗಿದೆ.

ನಗರದ ಸಿಪಿಐ ಕಚೇರಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮುಂದಿನ ಆಗುಹೋಗುಗಳ ಬಗ್ಗೆ ಚರ್ಚೆ ಕೂಡ ಮಾಡಲಾಯಿತು. ಸರ್ಕಾರ ಗಂಟೆಗೊಮ್ಮೆ ನಿರ್ಧಾರಗಳನ್ನು, ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಗೊಂದಲ ಉಂಟಾಗಿದ್ದು, ಗ್ರಾಮೀಣ ಪ್ರದೇಶದಿಂದ ಬಂದಂತಹವರಿಗೆ ಸಮಸ್ಯೆ ಆಗುತ್ತಿದ್ದು, ಸರ್ಕಾರದ ದಿಢೀರ್ ನಿರ್ಧಾರಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ತಹಶೀಲ್ದಾರ್. ಕೆ. ಬಿ. ರಾಮಚಂದ್ರಪ್ಪ, ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ಪಿಎಸ್‌ಐ ಬಸವರಾಜ್ ತೆಲಿ, ಗ್ರಾಮಾಂತರ ಪಿಎಸ್‌ಐ ಡಿ. ರವಿಕುಮಾರ್, ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್ ಇವರುಗಳ ನೇತೃತ್ವದಲ್ಲಿ ಎಲ್ಲ ಇಲಾಖೆಯ ಸಿಬ್ಬಂದಿಗಳು ಅಂಗಡಿ ಮುಂಗಟ್ಟನ್ನು ಬಂದ್ ಮಾಡುವ ಕಾರ್ಯದಲ್ಲಿ ತೊಡಗಿದ್ದರು.

## ರಾಣೇಬೆನ್ನೂರು : ಕೋವಿಡ್ -19 ನಿಯಂತ್ರಣಕ್ಕೆ ಬಟ್ಟೆ ಅಂಗಡಿಗಳು ಬಂದ್

ರಾಣೇಬೆನ್ನೂರು, ಏ.23- ಕೋವಿಡ್ ಸೋಂಕು ವ್ಯಾಪಕವಾಗಿ ಹರಡುತ್ತಿದ್ದು, ಸೋಂಕನ್ನು ಕಟ್ಟಿಹಾಕಲು ಬಿಗಿ ಕ್ರಮ ಕೈಗೊಳ್ಳಲಾಗುತ್ತಿದ್ದು, ತಾಲ್ಲೂಕಿನ ಎಲ್ಲಾ ಬಟ್ಟೆ ಅಂಗಡಿಗಳನ್ನು ಮೇ 4 ರವರೆಗೆ ಸಂಪೂರ್ಣ ಬಂದ್ ಮಾಡಲು ಆದೇಶಿಸಲಾಗಿದೆ ಎಂದು ತಹಶೀಲ್ದಾರ್ ಶಂಕರ್ ಮಾಧ್ಯಮಗಳಿಗೆ ತಿಳಿಸಿದರು.

ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ, ಒಳಗೆ ವ್ಯಾಪಾರ ಮಾಡುವ ಹಾಗೂ ಕೊಳ್ಳುವವರಿಗೆ ಉಪಹಾರದ ವ್ಯವಸ್ಥೆಯನ್ನು ಮಾಡುವ ವರ್ತಕರ ಬಗ್ಗೆ ದೂರುಗಳು ಕೇಳಿಬಂದಿದ್ದು, ಅಂತಹ ಚಟುವಟಿಕೆಗಳು ಕಂಡುಬಂದಲ್ಲಿ ಅವರ ಮೇಲೆ ಕಾನೂನಿನ ಕಠಿಣ ಕ್ರಮ ಜರುಗಿಸಲಾಗುವುದು ಎಂದು ತಹಶೀಲ್ದಾರರು ಎಚ್ಚರಿಕೆ ನೀಡಿದರು.

ಮದುವೆಗೆ 50, ಮಸಣಕ್ಕೆ 20 ಜನರು ತೆರಳಲು ಅವಕಾಶ, ಸಾರ್ವಜನಿಕ, ರಾಜಕೀಯ ಕಾರ್ಯಕ್ರಮಗಳು ಬಂದ್, ಬ್ಯಾಂಕ್, ವಿಮೆ ಮತ್ತು ಮಾಧ್ಯಮ ಸೇವೆ ನಿರಾತಂಕ. ಕಟ್ಟಡ ನಿರ್ಮಾಣಕ್ಕೆ ಅವಕಾಶ, ಚಲನಚಿತ್ರ, ಶಾಪಿಂಗ್, ಮಾಲ್, ಯೋಗ, ಜಿಮ್‌ಗಳಿಗೆ ನಿರ್ಬಂಧ ಹೇರಲಾಗಿದೆ ಎಂದು ತಹಶೀಲ್ದಾರ್ ಶಂಕರ್ ವಿವರಿಸಿದರು.

ತಾಲ್ಲೂಕಿನ 24 ಕೇಂದ್ರಗಳಲ್ಲಿ ಪ್ರತಿದಿನ 15 ಸಾವಿರ ಕೋವಿಡ್ ತಪಾಸಣೆ ಮಾಡಲಾಗುತ್ತಿದೆ. ಈಗ 300 ಜನರಿಗೆ ಲಸಿಕೆ ಹಾಕುತ್ತಿದ್ದು, 1 ಸಾವಿರಕ್ಕೆ ಹೆಚ್ಚಿಸಲಾಗುತ್ತಿದೆ. ಅವಶ್ಯವಿದ್ದಷ್ಟು ಲಸಿಕೆ ಲಭ್ಯವಿದೆ ಎಂದು ಹೇಳಿದರು.

## ಜಗಳೂರು ತಾಲ್ಲೂಕಿನಲ್ಲಿ ಬಿರುಗಾಳಿ ಸಹಿತ ಮಳೆ: 15 ಮನೆಗಳ ಕುಸಿತ



ಜಗಳೂರು, ಏ.23- ತಾಲ್ಲೂಕಿನಾದ್ಯಂತ ಇಂದು ಅಲ್ಲಲ್ಲಿ ಗುಡುಗು, ಬಿರುಗಾಳಿ ಸಹಿತ ಮಳೆಯಾಗಿದ್ದು ಅಪಾರ ಹಾನಿ ಉಂಟಾಗಿದೆ.

ತಾಲ್ಲೂಕಿನ ತೊರೆಸಾಲು ಭಾಗದ ಸಿ.ಎಂ. ಹೊಳೆ, ಮಲ್ಲಾಪುರ, ದಿಬ್ಬದಹಳ್ಳಿ, ಕಮಂಡಲಗೊಂದಿ, ಹಾಲೇಹಳ್ಳಿ, ಸಾಲೇಹಳ್ಳಿ, ಹಿರೇಮಲ್ಲನಹೊಳೆ, ಹುಚ್ಚವ್ವನಹಳ್ಳಿ ಭಾಗದಲ್ಲಿ ಗುಡುಗು, ಬಿರುಗಾಳಿ ಸಹಿತ ಭಾರೀ ಮಳೆಗೆ ಮನೆ ಮೇಲಿನ ಶೀಟ್ ಹಾರಿ ಮರಗಳು, ವಿದ್ಯುತ್ ಕಂಬಗಳು ಧರೆಗೆ ಉರುಳಿವೆ.

ತಾಲ್ಲೂಕಿನ ತಾಯಿಟೋಣಿ ಗ್ರಾಮದಲ್ಲಿ ಆರು ಮನೆಗಳು ಕುಸಿದು, ಅಪಾರ ನಷ್ಟ ಉಂಟಾಗಿದೆ. ಜನರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಡಜನರು ಮನೆ ಕಳೆದುಕೊಂಡು ತೀವ್ರ ತೊಂದರೆಗೀಡಾಗಿದ್ದಾರೆ. ಗ್ರಾಮದಲ್ಲಿ ಹಲವೆಡೆ ಮರಗಳು ಉರುಳಿದ್ದು, ಒಂದೇ ದಿನದ ಮಳೆಗೆ ಗ್ರಾಮದ ಕೆರೆ ತುಂಬಿ ಕೋಡಿ ಬಿದ್ದಿದೆ ಎಂದು ಗ್ರಾಮದ ರೈತ ಮಾಧವರೆಡ್ಡಿ ತಿಳಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಲಸಿಕಾ ಅಭಿಯಾನ



ಹರಪನಹಳ್ಳಿ, ಏ.23- ಕೋವಿಡ್ ಲಸಿಕೆ ಹಾಕಿಸಿ, ಹರಪನಹಳ್ಳಿ ಪಟ್ಟಣವನ್ನು ಕೋವಿಡ್ ಮುಕ್ತ ನಗರವನ್ನಾಗಿ ಮಾಡೋಣ ಎಂಬ ಸಂದೇಶದೊಂದಿಗೆ 13 ಕೇಂದ್ರಗಳಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ಹಾಕಲಾಯಿತು.

ಕೋವಿಡ್ ಎರಡನೇ ಅಲೆಯಿಂದ ದೇಶವೇ ತತ್ತರಿಸಿ ಹೋಗುತ್ತಿದೆ. ಈ ಮಹಾ ಮಾರಿಯನ್ನು ಹೊಡೆದೋಡಿಸಲು ಲಸಿಕೆ ತುಂಬಾ ಉಪಯುಕ್ತವಾಗಿದ್ದು, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯ್ತಿ, ಪುರಸಭೆ ಕಾರ್ಯಾಲಯ ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿಯಲ್ಲಿ ಇಂದು ಹರಪನಹಳ್ಳಿ ನಗರದಲ್ಲಿ 45 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೋವಿಡ್ ಲಸಿಕೆ ಅಭಿಯಾನ ನಡೆಯಿತು.

ಸ.ಹಿ.ಪ್ರಾ. ಶಾಲೆ ಕುರುಬರಗೇರಿ, ಸ.ಹಿ. ಪ್ರ. ಶಾಲೆ ಕೆಳಗಿನ ಉಪ್ಪಾರಗೇರಿ, ಸ.ಹಿ.ಪ್ರ. ಶಾಲೆ ಮೇಗಳಪೇಟೆ, ಸ.ಹಿ.ಪ್ರ. ಶಾಲೆ ಇಸ್ಲಾಂಪುರ, ಸ.ಹಿ.ಪ್ರ. ಶಾಲೆ ಬಾಪೂಜಿ ನಗರ, ಸ.ಹಿ.ಪ್ರ. ಶಾಲೆ ಆಶ್ರಯ ಬಡಾವಣೆ, ಸ.ಕಿ. ಪ್ರಾ. ಶಾಲೆ 9ನೇ ವಾರ್ಡ್, ಮೇನ್ ಸ್ಕೂಲ್ ಬಣಗೇರಿ, ಉರ್ದು ಹೈಸ್ಕೂಲ್ ಹಿಪ್ಪಿತೋಟ, ಉರ್ದು ಸ್ಕೂಲ್ ಗುಂಡಿಕೇರಿ, ನ್ಯಾಷನಲ್ ಸ್ಕೂಲ್ , ಉರ್ದು ಸ್ಕೂಲ್, ಸರ್ಕಾರಿ ಪದವಿ ಪೂರ್ವ ಕಾಲೇಜ್ ಹರಪನಹಳ್ಳಿ ಈ 13 ಕೇಂದ್ರಗಳಲ್ಲಿ 45 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಕೋವಿಡ್ ಲಸಿಕೆ ಹಾಕಿಸುವ ಅಭಿಯಾನ ನಡೆಯಿತು.

# ವಿವಿಧೆಡೆ ರಾಮನವಮಿ ಆಚರಣೆ





ಮಲೇಬೆನ್ನೂರು, ಏ.23- ರಾಮನವಮಿ ಅಂಗವಾಗಿ ಮಲೇಬೆನ್ನೂರು ಹೋಬಳಿಯ ವಿವಿಧ ಕ್ಯಾಂಪ್‌ಗಳಲ್ಲಿರುವ ಶ್ರೀ ರಾಮ ಮಂದಿರಗಳಲ್ಲಿ ಸೀತಾರಾಮ ಕಲ್ಯಾಣೋತ್ಸವ ನಡೆಸಲಾಯಿತು.

ವಿನಾಯಕ ನಗರ ಕ್ಯಾಂಪ್ (ಜಿಗಳಿ ಕ್ಯಾಂಪ್) ನಲ್ಲಿರುವ ಶ್ರೀರಾಮ ಮಂದಿರದಲ್ಲಿ ವಿಶೇಷ ಪೂಜೆ, ಅಭಿಷೇಕ ಮತ್ತು ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಪಾನಕ, ಕೋಸಂಬರಿ ವಿತರಿಸಲಾಯಿತು. ವೇಮನ ಗುರುಪೀಠದ ಶ್ರೀ ವೇಮನಾನಂದ ಸ್ವಾಮೀಜಿ, ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಪುತ್ರ ಅರ್ಜುನ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಜಿಗಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ. ದೇವೇಂದ್ರಪ್ಪ, ಜಿ.ಎಂ. ಆನಂದಪ್ಪ, ಭಾಸ್ಕರ್‌ರಾವ್ ಕ್ಯಾಂಪಿನ ಮಾಜಿ ಪ್ರಧಾನರಾದ ಸತ್ಯನಾರಾಯಣ, ಕುಂಬಳೂರು ಗ್ರಾ.ಪಂ. ಸದಸ್ಯ ಶ್ರೀನಿವಾಸ್, ಮಾಜಿ ಅಧ್ಯಕ್ಷ ಮೇಕಾ ನಾಗೇಶ್ವರರಾವ್, ಸುಮಿತ್ರಮ್ಮ ಕರಿಬಸಪ್ಪ, ಮಾಜಿ ಸದಸ್ಯ ಎನ್. ಪ್ರಸಾದ್ ರಾವ್, ದೇವಸ್ಥಾನ ಸಮಿತಿ ಅಧ್ಯಕ್ಷ ಸಿ.ಹೆಚ್. ಪ್ರಸಾದ್ ಹಾಗೂ ಕ್ಯಾಂಪ್ ಗ್ರಾಮಸ್ಥರು ಭಾಗವಹಿಸಿದ್ದರು.

ಸತ್ಯನಾರಾಯಣ ರಾವ್ ಕ್ಯಾಂಪ್, ಭಾಸ್ಕರ್‌ರಾವ್ ಕ್ಯಾಂಪ್, ನಂದಿಗುಡಿ ಕ್ಯಾಂಪ್, ಹಳ್ಳಿಹಾಳ್ ಕ್ಯಾಂಪ್‌ನಲ್ಲೂ ರಾಮನವಮಿ ಹಮ್ಮಿಕೊಳ್ಳಲಾಗಿತ್ತು. ನೆಹರು ಕ್ಯಾಂಪ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗ ವಾಡಿ ವೀರೇಶ್, ತಾ.ಪಂ. ಅಧ್ಯಕ್ಷ ಆದಾಪುರ ವೀರ ಭದ್ರಪ್ಪ, ಸಾಲಕಟ್ಟೆ ಸಿದ್ದಪ್ಪ ಇನ್ನಿತರರು ಪಾಲ್ಗೊಂಡಿದ್ದರು.

## ಹರಿಹರದ ಗಾಂಧೀ ಮೈದಾನಕ್ಕೆ ಸ್ಥಳಾಂತರವಾದ ತರಕಾರಿ ಮಾರುಕಟ್ಟೆ



ಹರಿಹರ, ಏ.23- ದಿನೇ ದಿನೇ ಕೊರೊನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದಿನ ನಿತ್ಯ ನಡೆಸುತ್ತಿದ್ದ ತರಕಾರಿ ಮಾರುಕಟ್ಟೆಯನ್ನು ಬಂದ್ ಮಾಡಿ, ಗಾಂಧಿ ಮೈದಾನದಲ್ಲಿ ತರಕಾರಿ ಮಾರಾಟಕ್ಕೆ ನಗರಸಭೆ ವತಿಯಿಂದ ವ್ಯವಸ್ಥೆ ಮಾಡಲಾಗುತ್ತದೆ ಎಂದು ಪೌರಾಯುಕ್ತೆ ಎಸ್. ಲಕ್ಷ್ಮಿ ತಿಳಿಸಿದರು.

ನಗರದ ಗಾಂಧಿ ಮೈದಾನದಲ್ಲಿ ಅವರು ಪತ್ರಕರ್ತರ ಜೊತೆಗೆ ಮಾತನಾಡುತ್ತಾ, ಹೂವು, ಹಣ್ಣು ಮಾರಾಟಕ್ಕೆ ಗ್ರಂಥಾಲಯ ಮುಂಭಾಗದ ಸ್ಥಳದಲ್ಲಿ ವ್ಯವಸ್ಥೆ ಮಾಡಲಾಗಿದೆ.


ಗಾಂಧಿ ಮೈದಾನದಲ್ಲಿ ಸಾರ್ವಜನಿಕರು ಅಂತರ ಕಾಪಾಡಿಕೊಂಡು ವ್ಯವಹಾರ ಮಾಡುವುದಕ್ಕೆ ಬಣ್ಣದ ಮಾರ್ಕ್‌ಗಳನ್ನು ಹಾಕಲಾಗಿದೆ. ಇದನ್ನು ಪಾಲಿಸಬೇಕು. ನಾಳೆ ಶನಿವಾರ ಮತ್ತು ಭಾನುವಾರ ನಗರದಲ್ಲಿ ಔಷಧಿ ಅಂಗಡಿಯನ್ನು ಹೊರತುಪಡಿಸಿ ಯಾವುದೇ ಅಂಗಡಿ ಮುಂಗಟ್ಟನ್ನು ತೆರೆದು ವ್ಯಾಪಾರ ವಹಿವಾಟು ನಡೆಸುವುದಕ್ಕೆ ಅವಕಾಶ ಇರುವುದಿಲ್ಲ. ಸಂಪೂರ್ಣವಾಗಿ ಬಂದ್ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಎಇಇ ಬಿರಾದಾರ, ಸಿಬ್ಬಂದಿಗಳಾದ ಮಂಜುನಾಥ್, ಕಿರಣ್ ಕುಮಾರ್, ತಿಪ್ಪೇಸ್ವಾಮಿ, ಕರೂರು ಮಂಜುನಾಥ್, ಪ್ರಕಾಶ್, ಪ್ರವೀಣ್, ರಾಜು ಬಣಕಾರ್, ತಿಮ್ಮಪ್ಪ, ತಿಮ್ಮಯ್ಯ ಇತರರು ಹಾಜರಿದ್ದರು.

## ಕೊರೊನಾ : ಭಾರತಕ್ಕೆ ಫ್ರಾನ್ಸ್ ನೆರವು

ನವದೆಹಲಿ, ಏ. 23 – ಆಕ್ಸಿಜನ್ ಕೊರತೆಯಿಂದ ತತ್ತರಿಸಿರುವ ಭಾರತಕ್ಕೆ ನೆರವಾಗುವುದಾಗಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮೆಕ್ರಾನ್ ತಿಳಿಸಿದ್ದಾರೆ. ಭಾರತೀಯರ ಜೊತೆ ದೃಢವಾಗಿ ನಿಲ್ಲುವ, ಕೊರೊನಾ ಪ್ರಕರಣಗಳನ್ನು ಎದುರಿಸುವ ಸಂದೇಶ ನೀಡಲು ಬಯಸುತ್ತೇನೆ. ಫ್ರಾನ್ಸ್ ಈ ಹೋರಾಟದಲ್ಲಿ ನಿಮ್ಮ ಜೊತೆಗಿದೆ. ನಾವು ನಿಮಗೆ ಬೆಂಬಲಿಸುತ್ತೇವೆ ಎಂದು ಮೆಕ್ರಾನ್ ತಿಳಿಸಿದ್ದಾರೆ. ಫ್ರಾನ್ಸ್ ಪ್ರಧಾನಿ ಹೇಳಿಕೆಯಲ್ಲಿ ಭಾರತದಲ್ಲಿರುವ ಫ್ರಾನ್ಸ್ ರಾಯಭಾರಿ ಎಮ್ಯಾನ್ಯುಯಲ್ ಲೆನ್ಯೆನ್ ಟ್ವೀಟ್ ಮಾಡಿ ತಿಳಿಸಿದ್ದಾರೆ.

## ಗಾಳಿ, ಮಳೆಗೆ ಸಂಕ್ಲೀಪುರದಲ್ಲಿ ನೆಲಕಚ್ಚಿದ ಭತ್ತ



ಮಲೇಬೆನ್ನೂರು, ಏ.23- ಗುರುವಾರ ರಾತ್ರಿ ಸುರಿದ ಬಿರುಗಾಳಿ, ಸಿಡಿಲು-ಗುಡುಗು ಸಹಿತ ಮಳೆಯಿಂದಾಗಿ ಸಂಕ್ಲೀಪುರ ಗ್ರಾಮದ ಸುಮಾರು 50 ಎಕರೆ ಭತ್ತದ ಬೆಳೆ ನೆಲಕಚ್ಚಿದೆ. ಜಿಗಳಿ ಗ್ರಾಮದಲ್ಲಿ ಧರ್ಮಪ್ಪ ತಂದೆ ರಂಗಪ್ಪ ಅವರಿಗೆ ಸೇರಿದ ಮನೆ ಭಾಗಶಃ ಹಾನಿಯಾಗಿದ್ದು, ಹೊಸಹಳ್ಳಿ ಗ್ರಾಮದಲ್ಲೂ ಸುಭಾಷ್ ರೆಡ್ಡಿ ಅವರ ಮನೆ ಗೋಡೆ ಕುಸಿದು ಬಿದ್ದಿದೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಸ್ಥಳ ಪರಿಶೀಲಿಸಿ ಹಾನಿ ವಿವರ ನೀಡುವಂತೆ ಗ್ರಾಮ ಲೆಕ್ಕಾಧಿಕಾರಿಗಳಿಗೆ ಸೂಚಿಸಿದ್ದೇನೆಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

## ಗಿರೀಶ್‌ಗೆ ಪ್ರಶಸ್ತಿ

**(1ನೇ ಪುಟದಿಂದ)** ಗಿರೀಶ್ ಭಾಜನರಾಗಿದ್ದಾರೆ.

ವಿವಿಧ ಇಲಾಖೆಗಳ 10 ಜನ ಅಧಿಕಾರಿಗಳಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಘೋಷಿಸಿ ಸರ್ಕಾರ ಇಂದು ಆದೇಶ ಹೊರಡಿಸಿದೆ. ಪ್ರಶಸ್ತಿಗೆ ಆಯ್ಕೆಯಾದ 10 ಜನರಲ್ಲಿ ತಹಶೀಲ್ದಾರ್ ಗಿರೀಶ್ ಕೂಡಾ ಒಬ್ಬರಾಗಿದ್ದು, ಈ ಪ್ರಶಸ್ತಿಯು 25 ಸಾವಿರ ರೂ. ಪ್ರೋತ್ಸಾಹ ಧನ ಮತ್ತು ಪ್ರಮಾಣ ಪತ್ರವನ್ನೊಳಗೊಂಡಿದೆ.

ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಸರ್ಕಾರವು ಪ್ರತಿ ವರ್ಷ ಜನವರಿ 26ರ ಗಣ ರಾಜ್ಯೋತ್ಸವದಂದು ನೀಡುತ್ತಿತ್ತು. ಏಪ್ರಿಲ್ 21 ನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನಾಗಿ ಆಚರಿಸಲು ಕರ್ನಾಟಕ ಸರ್ಕಾರ ಈ ವರ್ಷ ನಿರ್ಧರಿಸಿದ್ದು, ಈ ದಿನಾಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲು ಉದ್ದೇಶಿಸಿತ್ತು. ಆದರೆ, ಕೊರೊನಾ ವೈರಸ್ ಅಲೆಯ ಹಿನ್ನೆಲೆಯಲ್ಲಿ ನಿನ್ನೆ ನಡೆಯಬೇಕಿದ್ದ ಈ ಕಾರ್ಯಕ್ರಮವನ್ನು ಮುಂದೂಡಲಾಗಿದ್ದು, ಅಂದು ನಡೆಯುವ ಸಮಾರಂಭದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಉಚಿತ ಧಾನ್ಯ

**(1ನೇ ಪುಟದಿಂದ)** ಪಡಿತರ ಮೂಲಕ ಪ್ರತಿ ವ್ಯಕ್ತಿಗೆ ತಲಾ 5 ಕೆಜಿ ಹೆಚ್ಚುವರಿ ಆಹಾರ ಧಾನ್ಯ ನೀಡಲಾಗುವುದು. ಈ ಬಾರಿ ನಾವು ಬೇಳೆ ಕೊಡುವುದಿಲ್ಲ ಎಂದು ಪಡಿತರ ಕಾರ್ಯ ದರ್ಶಿ ಸುಧಾಂಶು ಪಾಂಡೆ ಹೇಳಿದ್ದಾರೆ. 2020ರಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿ ಉಚಿತವಾಗಿ ಆಹಾರ ಧಾನ್ಯ ನೀಡಲಾಗಿತ್ತು.

## ಸೋಂಕಿತರ ಸಾವು

**(1ನೇ ಪುಟದಿಂದ)** ಬೇರೆ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಎರಡು ದಿನಗಳ ಹಿಂದಷ್ಟೇ ನಾಸಿಕ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಟ್ಯಾಂಕ್ ಸೋರಿಕೆಯಾಗಿ 24 ಜನರು ಉಸಿರು ಕಟ್ಟಿ ಸಾವನ್ನಪ್ಪಿದ್ದರು.

## ಹಿಂದೂ ರುದ್ರಭೂಮಿ ಜಾಗಕ್ಕೆ ಕಾಂಪೌಂಡ್ ಕಾಮಗಾರಿಗೆ ಭೂಮಿಪೂಜೆ



ದಾವಣಗೆರೆ, ಏ. 23- ನಗರ ಪಾಲಿಕೆ 1ನೇ ವಾರ್ಡಿನ ಮಹಾನಗರ ಪಾಲಿಕೆ ವತಿಯಿಂದ 2020-21ನೇ ಸಾಲಿನಲ್ಲಿ 15ನೇ ಹಣಕಾಸು ಅನುದಾನದಡಿ 50 ಲಕ್ಷ ರೂ.ಗಳ ವೆಚ್ಚದಲ್ಲಿ ಹಮ್ಮಿಕೊಂಡಿರುವ ದೊಡ್ಡಬೂದಿಹಾಳ್ ಸರ್ವೇ ನಂಬರ್ 112ರ ಹಿಂದೂ ರುದ್ರಭೂಮಿ ಜಾಗಕ್ಕೆ ಕಾಂಪೌಂಡ್ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿಪಕ್ಷನಾಯಕ ಎ. ನಾಗರಾಜ್, ವಾರ್ಡ್ ಸದಸ್ಯ ಜಿ.ಡಿ. ಪ್ರಕಾಶ್ ಮಹಾನಗರ ಪಾಲಿಕೆ ಅಧಿಕಾರಿ/ನೌಕರ ವರ್ಗದವರು ಉಪಸ್ಥಿತರಿದ್ದರು.

## ಕರಾಟೆ : ಸೋಮೇಶ್ವರಕ್ಕೆ ಬಹುಮಾನ



ದಾವಣಗೆರೆ, ಏ. 23- ಈಚೆಗೆ ಕಟ ಮತ್ತು ಕುಮೈಟ್ ಶೈಲಿಯಲ್ಲಿ ನಡೆದ ಕರಾಟೆ ಟೂರ್ನಮೆಂಟ್‌ನಲ್ಲಿ ನಗರದ ಸೋಮೇಶ್ವರ ವಿದ್ಯಾಲಯದ ವಿದ್ಯಾರ್ಥಿಗಳಾದ 9ನೇ ತರಗತಿಯ ಗಣೇಶ್ ಹಾಗೂ 7ನೇ ತರಗತಿಯ ಶಾರದಾದೇವಿ, 2ನೇ ತರಗತಿಯ ಕ್ರಾಂತಿ ಭಾಗವಹಿಸಿ ವಿಜೇತರಾಗಿರುತ್ತಾರೆ.


## ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಕಿ.ವಿ.), ದಾವಣಗೆರೆ

**ಅಸಲು ದಾವೆ ನಂ. 225/2021**

**ವಾದಿಯರು : ಶ್ರೀ ಬಿ.ಪಿ. ಶಿವನಗೌಡ ಬಿನ್ ಪರಮೇಶಗೌಡರು ಮತ್ತು ಇತರೆ 7 ಜನರು ವಿರುದ್ಧ - ಪ್ರತಿವಾದಿ : ಶ್ರೀ ಹೆಚ್.ಎನ್. ಮಂಜುನಾಥ್**

**ಸಾರ್ವಜನಿಕ ಹಿತಾಸಕ್ತಿಯ ದಾವೆಯ ಪ್ರಕಟಣೆ (ಆ.1, ರೂ.8ರ ಅಡಿಯಲ್ಲಿ)**

ಮೇಲ್ಕಂಡ ಪ್ರಕರಣದಲ್ಲಿ ವಾದಿಯರು, ಪ್ರತಿವಾದಿಯ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ದಾವೆ ಹೂಡಿ ಷೆಡ್ಯೂಲ್ ಜಮೀನನ್ನು ಗೋಮಾಳ ಎಂದು ಘೋಷಿಸಿ ಅದನ್ನು ಯಾವತ್ತು ಅದೇ ರೀತಿ ಸಂರಕ್ಷಣೆ ಮಾಡಬೇಕೆಂದು ಹಾಗೂ ಪ್ರತಿವಾದಿಯ ಷೆಡ್ಯೂಲ್ ಜಮೀನನ್ನು ಮಾರಾಟ ಮಾಡಬಾರದೆಂದು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ. ಸಾರ್ವಜನಿಕರು ಮೇಲ್ಕಂಡ ದಾವೆಯಲ್ಲಿ ವಾದಿಯರಾಗಿ ಯಾ ಪ್ರತಿವಾದಿಯಾಗಿ ಸೇರಲು ಇಚ್ಛಿಸಿದಲ್ಲಿ ಹಾಗೂ ಷೆಡ್ಯೂಲ್ ಜಮೀನಿನ ಬಗ್ಗೆ ಆಸಕ್ತಿಯಿದ್ದಲ್ಲಿ ತಾ. 31.5.2021ರಂದು ಹಾಜರಾಗಿ ಸೇರ್ಪಡೆಗೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಬಿಸಲೇರಿ-ಮಹದೇವಿಪುರ ಗ್ರಾಮದ "ಗೋಮಾಳ" ಜಮೀನು ರಿ.ಸ.ನಂ. 91, ವಿಸ್ತೀರ್ಣ ಎಕರೆ ಇಲ್ಲ-ಗುಂಟೆ 28 ಮಾತ್ರ ಮತ್ತು ಇದರ ಚಕ್ಕುಬಂದಿ : ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣಕ್ಕೆ ಪ್ರತಿವಾದಿಯ ಜಮೀನುಗಳು ಹಾಗೂ ಅವುಗಳ ರಿ.ಸ.ನಂ. 89,90 ಮತ್ತು 95 ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿನಾಂಕ : 21.04.2021ರಂದು ಆದೇಶಿಸಲಾಗಿದೆ.

ಸಹಿ/- ಶ್ರೀ ಜಗದೀಶ್ ಹಿರೇಮಠ, ಶ್ರೀ ಆಶ್ವೀಜ್ ಹಿರೇಮಠ್, ನ್ಯಾಯವಾದಿಗಳು, ದಾವಣಗೆರೆ.

ಸಹಿ/- ಶಿರಸ್ತೇದಾರರು ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಕಿ.ವಿ.) ದಾವಣಗೆರೆ.



## ಕರ್ನಾಟಕ ಗೃಹ ಮಂಡಳಿ

ವಸತಿ ಇಲಾಖೆ

ಕರ್ನಾಟಕ ಗೃಹ ಮಂಡಳಿ ಸಮುದಾಯ ನಿರ್ಮಾಣದತ್ತ

**ದಾವಣಗೆರೆ ಜಿಲ್ಲೆಯಲ್ಲಿ ಮೂಲೆ ನಿವೇಶನಗಳ ಇ-ಹರಾಜು**

ಇ-ಹರಾಜು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 22-04-2021 ಮಧ್ಯಾಹ್ನ : 3-00 ಗಂಟೆಗೆ

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ 17-05-2021 ಮಧ್ಯಾಹ್ನ 3-00 ಗಂಟೆ

ಮುಕ್ತಾಯ ದಿನಾಂಕ ಮತ್ತು ಸಮಯ 19-05-2021 ಮಧ್ಯಾಹ್ನ 3-00 ಗಂಟೆ

**ಬಿಡ್ ದರದ ಕನಿಷ್ಠ ಏರಿಕೆ**
ಮೂಲೆ ನಿವೇಶನಗಳಿಗೆ ಪ್ರತಿ ಚ.ಮೀ.ಗೆ ರೂ.300/- ಹಾಗೂ ವಾಣಿಜ್ಯ ನಿವೇಶನಗಳಿಗೆ ಪ್ರತಿ ಚ.ಮೀ.ಗೆ ರೂ.600/- ಗಳ ಗುಣಕಗಳಲ್ಲಿ

| ಕ್ರ. ಸಂ. | ನಿವೇಶನ ಸಂಖ್ಯೆ | ವರ್ಗ | ಅಳತೆಗಳು (ಮೀ. ಗಳಲ್ಲಿ) | | ವಿಸ್ತೀರ್ಣ (ಚ.ಮೀ.ಗಳಲ್ಲಿ) |
|---|---|---|---|---|---|
| | | | ಪೂರ್ವ–ಪಶ್ಚಿಮ | ಉತ್ತರ–ದಕ್ಷಿಣ | |
| ದಾವಣಗೆರೆ – ಕುಂದವಾಡದ ಮೂಲೆ ನಿವೇಶನಗಳು | | | | | |
| ಮಂಡಳಿ ದರ ಪ್ರತಿ ಚದರ ಮೀಟರ್ ಗೆ EWS –ರೂ. 10764/– LIG, MIG, HIG – ರೂ. 12917/– | | | | | |
| 1 | 3122 | EWS | 9.00 | 9.00 | 81.00 |
| 2 | 3173 | EWS | 6.00 | 9.00 | 54.00 |
| 3 | 3188 | EWS | 6.00 | 9.00 | 54.00 |
| 4 | 1501 | LIG | 9.0 | 11.6 | 104.40 |
| 5 | 1488 | LIG | 9.0 | 11.6 | 104.40 |
| 6 | 1256 | LIG | 15.0 | 10.50 | 157.50 |
| 7 | 2408 | LIG | (9.10+11.00)/2 | 12.00 | 120.60 |
| 8 | 1246 | MIG | 15.0 | (12.0+15.0)/2 | 202.50 |
| 9 | 1247 | MIG | 15.0 | (16.40+15.0)/2 | 235.00 |
| 10 | 1355 | MIG | 16.0 | 9.0 | 135.00 |
| 11 | 2145 | MIG | 16.50 | 10.5 | 173.25 |
| 12 | 2017 | HIG-I | 15.60 | 18.0 | 280.80 |
| 13 | 2198 | HIG-I | 18.0 | 12.0 | 216.00 |
| 14 | 1087 | HIG-II | 18.0 | 24.0 | 360.00 |
| 15 | 2236 | HIG-II | 24.0 | 18.0 | 360.00 |

ನಿವೇಶನಗಳ ನಿರ್ದಿಷ್ಟ ಸ್ಥಳ, ಷರತ್ತು ಮತ್ತು ನಿಯಮ–ನಿಬಂಧನೆಗಳು ಮತ್ತು ಇತರೆ ಮಾಹಿತಿಗಳಿಗೆ: https://www.eproc.karnataka.gov.in and also visit our website https://www.khb.karnataka.gov.in/ಗೆ ಭೇಟಿ ನೀಡಿ.

ಇ–ಬಿಡ್ಡಿಂಗ್ ಸ್ಪಷ್ಟೀಕರಣಗಳು, ಆಕ್ಷೇಪಣೆಗಳು ಅಥವಾ ಯಾವುದೇ ಇತರೆ ಮಾಹಿತಿಗೆ ಕೆಳಕಂಡ ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ. ಮೊಬೈಲ್: +91 8046010000 8068948777

ಇತರೆ ವಿವರಗಳಿಗಾಗಿ: ಸಹಾಯಕ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಅಭಿಯಂತರರು/ ಕಂದಾಯ ಅಧಿಕಾರಿಗಳು/ ಸಹಾಯಕ ಕಂದಾಯ ಅಧಿಕಾರಿಗಳು ದೂರವಾಣಿ ಸಂಖ್ಯೆ 9448470311/9483322011

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮನೋಜ್ ಕುಮಾರ್ ಮೀನಾ, ಭಾ.ಆ.ಸೇ. ಕಾರ್ಯದರ್ಶಿಗಳು, ವಸತಿ ಇಲಾಖೆ, ಕರ್ನಾಟಕ ಗೃಹ ಮಂಡಳಿ

ಡಿ.ಎಸ್. ರಮೇಶ, ಭಾ.ಆ.ಸೇ. ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ


# ಕೊರೊನಾ : ಮನೆಯಲ್ಲಿಯೇ ನಮಾಜ್‌ಗೆ ತೀರ್ಮಾನ

**ಬಿ.ಸಿಕಂದರ್**

ದಾವಣಗೆರೆ, ಏ.23- ದಿನೇ ದಿನೇ ಹೆಚ್ಚುತ್ತಿರುವ ಕೊರೊನಾ ಪಾಸಿಟಿವ್ ಕೇಸ್‌ಗಳ ಸಂಖ್ಯೆ ಹಾಗೂ ಮಹಾಮಾರಿಯ ಮರಣ ಮೃದಂಗದಿಂದ ತತ್ತರಿಸಿರುವ ದೇಶದ ಜನತೆಯ ಪರಿಸ್ಥಿತಿಯನ್ನು ಮನಗಂಡು ಕೇಂದ್ರ, ಸರ್ಕಾರದ ತೀರ್ಮಾನಕ್ಕೆ, ರಾಜ್ಯ ಸರ್ಕಾರದ ಆದೇಶದಂತೆ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಬದ್ಧವಾಗಿರುವ ಮುಸ್ಲಿಂ ಬಾಂಧವರು ಇಂದು ತುರ್ತು ಸಭೆ ನಡೆಸಿ ರಂಜಾನ್ ತಿಂಗಳ ಪ್ರಾರ್ಥನೆಯನ್ನು ಮನೆಯಲ್ಲಿಯೇ ಸಲ್ಲಿಸುವುದಾಗಿ ಸ್ವಯಂ ತೀರ್ಮಾನ ತೆಗೆದು ಕೊಂಡರು.

ವಕ್ಫ್ ಇಲಾಖೆಯ ಸುತ್ತೋಲೆಯಂತೆ ಮಸೀದಿಗಳಲ್ಲಿ 5 ಜನರನ್ನು ಹೊರತುಪಡಿಸಿ ಉಳಿದವರಿಗೆ ಅವಕಾಶ ನೀಡಬಾರದು, ಮನೆಯಲ್ಲೇ ಪ್ರಾರ್ಥನೆ ಸಲ್ಲಿಸಲು ಮಸೀದಿಗಳ ಮುಖ್ಯಸ್ಥರು ಸಮಾಜ ಬಾಂಧವರಿಗೆ ಸಲಹೆ ನೀಡಬೇಕೆಂದು ಪ್ರಸ್ತಾಪಿಸಲಾಯಿತು.

ಆಜಾದ್ ನಗರ, ಬಾಷಾನಗರ ಸೇರಿದಂತೆ ಆಜು-ಬಾಜಿನ ಪ್ರದೇಶದಲ್ಲಿ ನಿನ್ನೆ ರಾತ್ರಿ ಪ್ರದಕ್ಷಿಣೆ ಮಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು, ಇಮಾಂ ನಗರ (ಅರಳಿಮರ) ವೃತ್ತದ ಬಳಿ 'ಜನತಾವಾಣಿ'ಯೊಂದಿಗೆ ಮಾತನಾಡಿದ ಡಿಸಿಯವರು, ಕರ್ಫ್ಯೂ ಜಾರಿ ಬಗ್ಗೆ ಪೊಲೀಸ್ ಇಲಾಖೆಯವರು ಧ್ವನಿವರ್ಧಕದಲ್ಲಿ ನಾಗರಿಕರಿಗೆ ಮನದಟ್ಟು ಮಾಡಿರುವುದರಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ ಎಂದರು.

**ವಕ್ಫ್ ಆದೇಶ; ಮಾತಿನ ಚಕಮಕಿ:** ಸಂಜೆಯಾಗುತ್ತಿದ್ದಂತೆ ವಕ್ಫ್ ಇಲಾಖೆಯ ಆದೇಶದ ಪ್ರತಿಗಳು ನಗರದ ಮಸೀದಿಗಳಿಗೆ, ಮಸೀದಿ ಮುಖ್ಯದ್ವಾರಗಳಲ್ಲಿ ಪ್ರಕಟಿಸುತ್ತಿದಂತೆ ದಿಢೀರ್ ತೀರ್ಮಾನದ ಆದೇಶ ನಮಾಜ್‌ಗೆ ಬರುವ ನಮಾಜಿಗಳು ಹಾಗೂ ಮಸೀದಿಯ ಮುಖ್ಯಸ್ಥರ ನಡುವೆ ಕೆಲವು ಮಸೀದಿಗಳಲ್ಲಿ ಮಾತಿನ ಚಕಮಕಿ ನಡೆಯಿತು. ಇಸ್ಲಾಂ ಪೇಟೆಯಲ್ಲಿರುವ ಮಸೀದಿಗೆ ಸರ್ಕಾರದ ಆದೇಶ ಪ್ರತಿ ಗೇಟಿಗೆ ಹಾಕಿ ಬೀಗ ಹಾಕಿರು ವುದನ್ನು ಕಂಡ ಸಾರ್ವಜನಿಕರು, ಯಾವುದೇ ಸವಾಲು ಮಾಡದೆ ತಮ್ಮ ತಮ್ಮ ಮನೆಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಮುಂದಾದರು.

# ಆಕ್ಸಿಜನ್ ಪೂರೈಕೆಗೆ 'ವಾಯು'ಬಲ

ನವದೆಹಲಿ, ಏ. 23 – ಸತತ ಎರಡು ದಿನಗಳಿಂದ 3 ಲಕ್ಷಕ್ಕೂ ಹೆಚ್ಚು ಕೊರೊನಾ ಸೋಂಕಿತರು ದೇಶಾದ್ಯಂತ ಕಂಡು ಬಂದಿದ್ದು, ಹೆಚ್ಚಾಗುತ್ತಿರುವ ಆಕ್ಸಿಜನ್ ಬೇಡಿಕೆ ಈಡೇರಿಸಲು ವಾಯುಪಡೆ ಸಹ ಕೈ ಜೋಡಿಸಿದೆ.

ಆಕ್ಸಿಜನ್ ಟ್ಯಾಂಕರ್ ಹಾಗೂ ಕಂಟೈನರ್‌ಗಳನ್ನು ವಾಯುಪಡೆಯ ವಿಮಾನಗಳು ಸಾಗಿಸಲಿವೆ. ರೈಲ್ವೆ ಸಹ ವೈದ್ಯಕೀಯ ಆಕ್ಸಿಜನ್ ಪೂರೈಕೆಯಲ್ಲಿ ಭಾಗಿಯಾಗಲಿದೆ.

ವಾಯುಪಡೆಯ ವಿಮಾನಗಳು ಆಕ್ಸಿಜನ್ ಟ್ಯಾಂಕರ್ ಹಾಗೂ ಕಂಟೈನರ್‌ಗಳ ಜೊತೆಗೆ ವೈದ್ಯರು ಹಾಗೂ ನರ್ಸಿಂಗ್ ಸಿಬ್ಬಂದಿಯನ್ನೂ ಕೊಚ್ಚಿ, ಮುಂಬೈ, ವಿಶಾಖಪಟ್ಟಣಂ ಹಾಗೂ ಬೆಂಗಳೂರು ಸೇರಿದಂತೆ, ಹಲವೆಡೆಗಳಿಂದ ದೆಹಲಿ ಆಸ್ಪತ್ರೆಗೆ ಕರೆ ತಂದಿದೆ. ದೇಶದ ವಿವಿಧ ಭಾಗಗಳ ಆಸ್ಪತ್ರೆಗಳಿಗೆ ಅಗತ್ಯ ಔಷಧಗಳನ್ನೂ ವಾಯುಪಡೆ ಪೂರೈಸಿದೆ.

ವಾಯುಪಡೆಯ ಸಿ-17, ಸಿ130ಜೆ, ಐಎಲ್-76, ಎಎನ್-32 ಹಾಗೂ ಅವ್ರೋ ವಿಮಾನಗಳ ಮೂಲಕ ಸರಕು ಸಾಗಣೆ ಮಾಡಲಾಗಿದೆ. ಚಿನೂಕ್ ಹಾಗೂ ಎಂಐ-17 ಹೆಲಿಕಾಪ್ಟರ್‌ಗಳನ್ನೂ ಸಹ ಸಿದ್ಧವಾಗಿರಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವದ ಹಲವು ನಾಯಕರು ಕೊರೊನಾ ಪಿಡುಗು ಎದುರಿಸಲು ಭಾರತಕ್ಕೆ ನೆರವಾಗುವುದಾಗಿ ಹೇಳಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮೆಕ್ರಾನ್ ಹಾಗೂ ಯುರೋಪ್ ಕೌನ್ಸಿಲ್ ಅಧ್ಯಕ್ಷ ಚಾರ್ಲಸ್ ಮೈಕೆಲ್ ಅವರು ಕೊರೊನಾ ವಿರುದ್ಧದ ಹೋರಾಟದಲ್ಲಿ ಭಾರತದ ಜೊತೆ ನಿಲ್ಲುವುದಾಗಿ ಹೇಳಿದ್ದಾರೆ.

ಜರ್ಮನಿಯಿಂದ 23 ಸಂಚಾರಿ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ವಿಮಾನದ ಮೂಲಕ ತರಿಸಲು ರಕ್ಷಣಾ ಸಚಿವಾಲಯ ನಿರ್ಧರಿಸಿದೆ. ಇವುಗಳು ಪ್ರತಿ ಗಂಟೆಗೆ 2,400 ಲೀಟರ್ ಆಕ್ಸಿಜನ್ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ.

ಇದಕ್ಕೂ ಮುಂಚೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರಮುಖ ಆಕ್ಸಿಜನ್ ಉತ್ಪಾದಕರ ಜೊತೆ ಸಂವಾದ ನಡೆಸಿದ್ದು, ತ್ವರಿತವಾಗಿ ಆಕ್ಸಿಜನ್ ಉತ್ಪಾದಿಸಿ ಪೂರೈಕೆ ಮಾಡುವಂತೆ ತಿಳಿಸಿದ್ದಾರೆ.

ಮಧ್ಯ ಪ್ರದೇಶದ ಜಬಲ್ಪುರದಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿನ ಐ.ಸಿ.ಯು. ಘಟಕಕ್ಕೆ ಆಕ್ಸಿಜನ್ ಪೂರೈಕೆ ನಿಂತು ಐವರು ಸಾವನ್ನಪ್ಪಿದ ಘಟನೆ ನಡೆದಿದ್ದು, ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಶುಕ್ರವಾರ ದೇಶದಲ್ಲಿ 3.32 ಲಕ್ಷ ಸೋಂಕಿತರು ಕಂಡು ಬಂದಿದ್ದು, 2,263 ಜನರು ಸಾವನ್ನಪ್ಪಿದ್ದಾರೆ. ದೇಶದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 24.28 ಲಕ್ಷವಾಗಿದೆ.

### ಹಾಸ್ಟೆಲ್‌ಗಳಲ್ಲೇ ಉಳಿದ ವಿದ್ಯಾರ್ಥಿಗಳು ಎಂಬ ದೂರಿನ ಹಿನ್ನೆಲೆ

# ಖಾಸಗಿ ಕಾಲೇಜಿಗೆ ಡಿಸಿ ದಿಢೀರ್ ಭೇಟಿ: ಪರಿಶೀಲನೆ






ದಾವಣಗೆರೆ, ಏ.23- ಕೋವಿಡ್ ಮಾರ್ಗಸೂಚಿ ಪಾಲಿಸದೇ ಪ್ರಾಕ್ಟಿಕಲ್ ಪರೀಕ್ಷೆ ಎಂಬ ಕಾರಣಕ್ಕೆ ಹಾಸ್ಟೆಲ್‌ಗಳಲ್ಲೇ ವಿದ್ಯಾರ್ಥಿಗಳನ್ನು ಉಳಿಸಿಕೊಂಡಿರುವ ಬಗ್ಗೆ ಬಂದ ದೂರಿನ ಹಿನ್ನೆಲೆಯಲ್ಲಿ ನಗರದ ಖಾಸಗಿ ಕಾಲೇಜೊಂದಕ್ಕೆ ಇಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಕಸ್ಮಾತ್ ಏನಾದರೂ ಅನಾಹುತವಾದರೆ ತಾವೇ ಕಾರಣವೆಂದು ವಿದ್ಯಾರ್ಥಿಗಳು, ಪಾಲಕರ ಬಳಿ ಮುಚ್ಚಳಿಕೆ ಪತ್ರ ಬರೆಸಿಕೊಂಡು ಹಾಸ್ಟೆಲ್‌ನಲ್ಲೇ ವಿದ್ಯಾರ್ಥಿಗಳನ್ನು ಇಟ್ಟುಕೊಂಡಿದೆ ಎಂಬ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಕೋವಿಡ್ ಮಾರ್ಗಸೂಚಿಯಂತೆ ಶಾಲಾ-ಕಾಲೇಜುಗಳು ಬಂದ್ ಆಗಬೇಕು. ಆನ್‌ಲೈನ್ ಕ್ಲಾಸ್ ಮಾಡಬೇಕು. ವಿದ್ಯಾರ್ಥಿಗಳನ್ನು ಮನೆಗೆ ಕಳಿಸಬೇಕೆಂದಿದೆ. ಇಲ್ಲವಾದರೆ ಅಂತಹ ಕಾಲೇಜುಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಕಾಲೇಜು ಆಡಳಿತಕ್ಕೆ ಎಚ್ಚರಿಕೆ ನೀಡಿದರು. ಅಲ್ಲದೇ ಸರ್ಕಾರದ ನಿಯಮಾವಳಿ ಉಲ್ಲಂಘನೆ ಮಾಡದಂತೆ ಸೂಚನೆ ನೀಡಿದರು.

ಕಾಲೇಜು ಆವರಣದಲ್ಲಿ ಕಂಡ ವಿದ್ಯಾರ್ಥಿನಿಯರನ್ನು ಮಾತನಾಡಿಸಿದ ಜಿಲ್ಲಾಧಿಕಾರಿ, ಯಾವ ಊರು, ಕಾಲೇಜಿನಲ್ಲಿ ಪಾಠ ನಡೆಸಲಾಗುತ್ತಿದೆಯೇ? ಎಂದು ಪ್ರಶ್ನಿಸಿದಾಗ ರಾಯಚೂರು, ಬಳ್ಳಾರಿ ಹೀಗೆ ಬೇರೆ ಊರಿನ ಈ ಕಾಲೇಜಿನ ವಿದ್ಯಾರ್ಥಿನಿಯರಾಗಿದ್ದು, ಯಾವುದೇ ಪಾಠ ನಡೆಯುತ್ತಿಲ್ಲ. ಏ.28ರಿಂದ ಪ್ರಾಕ್ಟಿಕಲ್ ಎಕ್ಸಾಂ ಇದ್ದು, ನಮಗೆ ಪಠ್ಯದ ವಿಷಯಗಳ ಬಗೆಗಿನ ಅನುಮಾನಗಳನ್ನು ಉಪನ್ಯಾಸಕರ ಬಳಿ ತಿಳಿಯಲು ಬಂದಿದ್ದೇವೆ ಎಂದು ತಿಳಿಸುತ್ತಿದ್ದಂತೆ, ಕೋವಿಡ್ ಹೆಚ್ಚುತ್ತಿರುವ ಕಾರಣ ಊರಿಗೆ ಪ್ರಯಾಣಿಸದೇ, ಕಾಲೇಜಿಗೆ ಹೋಗದೇ ಹಾಸ್ಟೆಲ್ ನಲ್ಲಿದ್ದು ಕೋವಿಡ್ ನಿಯಮ ಪಾಲಿಸುತ್ತಾ ಪರೀಕ್ಷೆಗೆ ತಯಾರಾಗುವಂತೆ ಮನವರಿಕೆ ಮಾಡಿದರು.

ಕಾಲೇಜು ಪಕ್ಕದಲ್ಲೇ ಇರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ಗೂ ಭೇಟಿ ನೀಡಿದ ಜಿಲ್ಲಾಧಿಕಾರಿ, ಕೋವಿಡ್ ನಿಯಮವನ್ನು ಕಟ್ಟು ನಿಟ್ಟಾಗಿ ಪಾಲಿಸಿ ಜಾಗ್ರತೆಯಿಂದ ಇರುವಂತೆ ತಿಳಿಸಿದರು.

## ಆಸ್ತಿ ತೆರಿಗೆ : ಶೇ. 5ರ ರಿಯಾಯಿತಿ ಸೌಲಭ್ಯ ಕಾಲಾವಧಿ ವಿಸ್ತರಣೆಗೆ ಮನವಿ



ದಾವಣಗೆರೆ, ಏ.23- ಏಪ್ರಿಲ್ ನಂತರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ಆಸ್ತಿ ತೆರಿಗೆ ಮೇಲಿನ ಶೇ. 5 ರ ರಿಯಾಯಿತಿ ಸೌಲಭ್ಯದ ಕಾಲಾವಧಿಯನ್ನು ಹಾಗೂ 2021-22ನೇ ಸಾಲಿನ ಜೂನ್ ನಂತರ ಪಾವತಿಸುವ ಆಸ್ತಿ ತೆರಿಗೆ ಮೇಲಿನ ದಂಡದ ಕಾಲಾವಧಿಯನ್ನೂ ಸಹ ವಿಸ್ತರಿಸಲು ಮೇಯರ್ ಎಸ್.ಟಿ. ವೀರೇಶ್ ನಗರಾಭಿವೃದ್ಧಿ ಸಚಿವರಲ್ಲಿ ಮನವಿ ಮಾಡಿದ್ದಾರೆ. ಸರ್ಕಾರದ ಸುತ್ತೋಲೆ ಪತ್ರದನ್ವಯ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಿರಾಸ್ತಿಗಳ ಆಸ್ತಿ ತೆರಿಗೆ ಪದ್ಧತಿ ಜಾರಿಗೊಳಿಸಬೇಕಾಗಿದ್ದು, ಇತ್ತೀಚಿನ ಸಾಮಾನ್ಯ ಸಭೆಯಲ್ಲಿ ಈ ಕಾಯಿದೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಪ್ರಸ್ತುತ ಈ ಕಾಯಿದೆಯಂತೆ ಆಸ್ತಿ ತೆರಿಗೆ ದರಗಳನ್ನು ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ 2021-22ನೇ ಸಾಲಿನಿಂದ ಅನ್ವಯವಾಗುವಂತೆ ನಿಗದಿಪಡಿಸಿ, ಆಸ್ತಿ ತೆರಿಗೆ ತಂತ್ರಾಂಶದಲ್ಲಿ ಕಾಲೋಚಿತಗೊಳಿಗಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುವ ಕಾರಣ ಆಸ್ತಿ ತೆರಿಗೆ ಪಾವತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ವೀರೇಶ್ ತಿಳಿಸಿದ್ದಾರೆ. ಹೀಗಾಗಿ 2021-22ನೇ ಸಾಲಿನ ಏಪ್ರಿಲ್ ತಿಂಗಳಿನಲ್ಲಿ 20 ದಿನಗಳು ಈಗಾಗಲೇ ಕಳೆದಿರುವುದರಿಂದ ಸಾರ್ವಜನಿಕರು ರಿಯಾಯಿತಿ ಸೌಲಭ್ಯ ಪಡೆದಿಲ್ಲವೆಂಬ ಅಂಶವನ್ನು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದಿರುವುದಾಗಿ ಹೇಳಿದ್ದಾರೆ.

## ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಘಟಕ : ಕೇಂದ್ರ

ನವದೆಹಲಿ, ಏ. 23 – ಎ.ಐ.ಐ.ಎಂ.ಎಸ್., ಎನ್.ಐ.ಸಿ. ಝಜ್ಜರ್ ರೀತಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ತಕ್ಷಣವೇ ಡಿ.ಆರ್.ಡಿ.ಒ. - ಟಾಟಾ ಸನ್ಸ್ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಕೇಂದ್ರಸರ್ಕಾರ ನಿರ್ಧರಿಸಿದೆ. ಇವು ಪ್ರತಿ ಗಂಟೆಗೆ ಸಾವಿರ ಲೀಟರ್ ಆಕ್ಸಿಜನ್ ಉತ್ಪಾದಿಸುತ್ತವೆ.

## ರೋಗದ ಲಕ್ಷಣ ಇದ್ದವರು ಆಸ್ಪತ್ರೆಗೆ

ಬೆಂಗಳೂರು, ಏ. 23 - ಯಾರಿಗೋ ಆಕ್ಸಿಜನ್ ಸಮಸ್ಯೆಯಾದರೆ ಅದನ್ನು ನೋಡಿ ಆತಂಕಗೊಂಡು ನಮಗೂ ಆಕ್ಸಿಜನ್ ಕೊಡಿ ಎಂದು ಒತ್ತಡ ಹಾಕ್ತಿದ್ದಾರೆ, ಇದರಿಂದ ಸಮಸ್ಯೆಯಾಗುತ್ತಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲರಿಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಬೇಡ. ತೀವ್ರ ರೋಗದ ಲಕ್ಷಣ ಇದ್ದವರಿಗೆ ಆಸ್ಪತ್ರೆಗೆ ದಾಖಲಾಗ ಬೇಕು. ಅಮೆರಿಕಾ, ಲಂಡನ್‌ನಲ್ಲಿ ಮನೆಯಲ್ಲೇ ಕುಳಿತು ಚಿಕಿತ್ಸೆ ಪಡೆದಿದ್ದಾರೆ.

ನಮ್ಮಲ್ಲಿಯೂ ಟೆಲಿಮೆಡಿಸಿನ್‌ನಿಂದ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಈಗ 10,15 ಸಾವಿರ ರೆಮ್ಡಿಸಿವಿರ್ ಪೂರೈಕೆ ಬರುತ್ತಿದೆ. ಕೇಂದ್ರ ಸಚಿವ ಸದಾನಂದಗೌಡರು ಇನ್ನು 25 ಸಾವಿರ ವೈಯಲ್ ಖರೀದಿಸಲು ಸಹಕಾರ ನೀಡಿದ್ದಾರೆ. ಕಿರಣ್ ಮಜುಂದಾರ್ ಷಾ ಅವರು ಸದ್ಯಕ್ಕೆ 5 ಸಾವಿರ ಕೊಡುವುದಾಗಿ ಹೇಳಿದ್ದಾರೆ, ಇನ್ನು ಸ್ವಲ್ಪ ದಿನಗಳಲ್ಲಿ 5000 ವೈಯಲ್ ಕೊಡ್ತೀವಿ ಎಂದು ಹೇಳಿದ್ದಾರೆ ಎಂದು ಸುಧಾಕರ್ ಹೇಳಿದ್ದಾರೆ.

## ಸಹಾಯಕ ಅಭಿಯಂತರ ಮುರುಗೇಂದ್ರಪ್ಪ ನಿಧನ



ದಾವಣಗೆರೆ,ಏ.23-ಅನಾರೋಗ್ಯ ದಿಂದ ಬಳಲುತ್ತಿದ್ದ ಮಹಾನಗರ ಪಾಲಿಕೆಯ ಸಹಾಯಕ ಅಭಿಯಂತರ ಎನ್. ಮುರುಗೇಂ ದ್ರಪ್ಪ ಅವರು ಇಂದು ರಾತ್ರಿ 8.15ಕ್ಕೆ ನಿಧನರಾದರು.

ಕಳೆದ ಒಂದು ವಾರದಿಂದ ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರಿಗೆ ಸುಮಾರು 50 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅವರು ಅಗಲಿದ್ದಾರೆ.

ಮುರುಗೇಂದ್ರಪ್ಪ ಅವರ ನಿಧನಕ್ಕೆ ಮೇಯರ್ ಎಸ್.ಟಿ. ವೀರೇಶ್, ನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಪೌರ ಸೇವಾ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್, ಜಿಲ್ಲಾ ಚಲುವಾದಿ ಮಹಾಸಭಾದ ಅಧ್ಯಕ್ಷರೂ ಆದ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಎನ್. ರುದ್ರಮುನಿ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಮುರುಗೇಂದ್ರಪ್ಪ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿರುವ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್ ನಾಗರಿಕ ಹಿತರಕ್ಷಣಾ ಸಮಿತಿಯ ಕೆ.ಎಂ. ವೀರಯ್ಯ ಸ್ವಾಮಿ, ಮುರುಗೇಂದ್ರಪ್ಪ ಅವರು ಸಾರ್ವಜನಿಕರ ಸಮಸ್ಯೆಗಳಿಗೆ ತತ್ ಕ್ಷಣವೇ ಸ್ಪಂದಿಸುತ್ತಿದ್ದರು ಎಂದು ಹೇಳಿದ್ದಾರೆ. ಈ ಬಡಾವಣೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಉದ್ಯಾನವನ ನಿರ್ಮಾಣಕ್ಕೆ ಒತ್ತು ಕೊಟ್ಟಿದ್ದನ್ನು ವೀರಯ್ಯ ಸ್ವಾಮಿ ಸ್ಮರಿಸಿದ್ದಾರೆ.

## 23 ಆಕ್ಸಿಜನ್ ಘಟಕ ಜರ್ಮನಿಯಿಂದ ವಿಮಾನದಲ್ಲಿ ಆಮದು

ನವದೆಹಲಿ, ಏ. 23 – ದೇಶದಲ್ಲಿ ವೈದ್ಯಕೀಯ ಆಕ್ಸಿಜನ್ ಕೊರತೆಯನ್ನು ಎದುರಿಸಲು ಜರ್ಮನಿಯಿಂದ 23 ಸಂಚಾರಿ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ವಿಮಾನಗಳಲ್ಲಿ ತರಲು ರಕ್ಷಣಾ ಸಚಿವಾಲಯ ನಿರ್ಧರಿಸಿದೆ.

ಪ್ರತಿಯೊಂದು ಘಟಕ ಪ್ರತಿ ನಿಮಿಷಕ್ಕೆ 40 ಲೀಟರ್ ಹಾಗೂ ಗಂಟೆಗೆ 2,400 ಲೀಟರ್ ಆಕ್ಸಿಜನ್ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ ಎಂದು ಅಧಿಕಾರಿ ಗಳು ತಿಳಿಸಿದ್ದಾರೆ. ಈ ಘಟಕಗಳನ್ನು ಸೈನ್ಯದ ವೈದ್ಯಕೀಯ ಸೇವೆಗಳ ಆಸ್ಪತ್ರೆಗಳಲ್ಲಿ ಅಳವಡಿಸಲಾಗುವುದು ಎಂದು ರಕ್ಷಣಾ ಸಚಿವಾಲಯದ ಪ್ರಧಾನ ವಕ್ತಾರ ಭರತ್ ಭೂಷಣ್ ತಿಳಿಸಿದ್ದಾರೆ. ಕೊರೊನಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಗತ್ಯ ವಸ್ತುಗಳಿಗೆ ವ್ಯವಸ್ಥೆ ಮಾಡಿಕೊಳ್ಳಲು ಸೈನ್ಯದ ಮೂರು ಸೇವೆಗಳಿಗೆ ತುರ್ತು ಹಣಕಾಸು ಅಧಿಕಾರ ನೀಡುವುದಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ 4 ದಿನಗಳ ಹಿಂದೆ ಹೇಳಿದ್ದರು.


ಹಾರ್ದಿಕ ಶುಭಾಶಯಗಳು

ದಿನಾಂಕ 24.4.2021ರಂದು ತಮ್ಮ 50ನೇ ವರ್ಷದ ಹುಟ್ಟುಹಬ್ಬ ಮತ್ತು 21ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ ದಾವಣಗೆರೆ ಲಯನ್ಸ್ ಕ್ಲಬ್ಬಿನ ಮಾಜಿ ಅಧ್ಯಕ್ಷರೂ, ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಟ್ರಾನ್ಸ್‌ಪೋರ್ಟ್ ಮಾಲೀಕರೂ, ಸಾಮಾಜಿಕ ಸೇವಾ ಕಾರ್ಯಕರ್ತರೂ, ನಮ್ಮ ಆತ್ಮೀಯರೂ ಆದ


ಶ್ರೀ ಬೆಳ್ಳೂಡಿ ಶಿವಕುಮಾರ್ ಮತ್ತು ಶ್ರೀಮತಿ ಲತಾ ಶಿವಕುಮಾರ್

ದಂಪತಿಗೆ ಹಾರ್ದಿಕ ಶುಭಾಶಯಗಳು.

- ಎಸ್. ಓಂಕಾರಪ್ಪ, ಅಧ್ಯಕ್ಷರು, ಲಯನ್ಸ್ ಕ್ಲಬ್
- ಮಹಾಂತೇಶ್ ಒಣರೊಟ್ಟಿ,
- ತಣಿಗೆರೆ ಶಿವಕುಮಾರ್,
- ಕಾರಿಗನೂರು ಗಂಗಾಧರ್,
- ಕಲಬುರ್ಗಿ ಪ್ರಭು




## ಆವರಗೊಳ್ಳ ಶ್ರೀಗಳ ತಪೋನುಷ್ಠಾನ ನಾಳೆ ಮಂಗಲ



ದಾವಣಗೆರೆ, ಏ.23- ವಿಶ್ವಶಾಂತಿಗಾಗಿ ಆವರಗೊಳ್ಳದ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಕೈಗೊಂಡಿರುವ 11 ದಿನಗಳ ತಪೋನುಷ್ಠಾನವು ನಾಡಿದ್ದು ದಿನಾಂಕ 25ರ ಭಾನುವಾರ ಮಂಗಲಗೊಳ್ಳುವುದು. ಭಾನುವಾರ ಬೆಳಿಗ್ಗೆ ರಾಮಘಟ್ಟ ಪುರವರ್ಗ ಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ಮತ್ತು ಹಾರ್ನಳ್ಳಿ ರಾಮಲಿಂಗೇಶ್ವರ ಮಠದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಮ್ಮುಖದಲ್ಲಿ ಮಂಗಲೋತ್ಸವ ಕಾರ್ಯಕ್ರಮ ಜರುಗಲಿದೆ.

**ರಂಜಾನ್ ರೋಜಾ ಸಮಯ**

ದಿನಾಂಕ : 24.04.2021
ಇಫ್ತೇಯಾರಿ ಸಮಯ : 6-47
ದಿನಾಂಕ 25.04.2021
ಸಹೇರಿ ಸಮಯ : 4-53

## ಕೊರೊನಾಗೆ ಕ್ಯಾಡಿಲಾ ಔಷಧಿಗೆ ಅನುಮತಿ

ನವದೆಹಲಿ, ಏ. 23 – ವಯಸ್ಕರಲ್ಲಿನ ಮಧ್ಯಮ ಸ್ವರೂಪದ ಕೊರೊನಾಗೆ ಚಿಕಿತ್ಸೆ ನೀಡಲು ಪೆಗಿಲೇಟೆಡ್ ಇಂಟರ್‌ಫೆರಾನ್ ಅಲ್ಫಾ - 2ಬಿ (ಪೆಗ್‌ಐಎಫ್‌ಎನ್) ಬಳಸಲು ತುರ್ತು ನಿರ್ಬಂಧಿತ ಅನುಮತಿ ನೀಡಲಾಗಿದೆ. ಜೈಡಸ್ ಕ್ಯಾಡಿಲಾ ಕಂಪನಿಯು ಈ ಔಷಧಿ ಉತ್ಪಾದಿಸುತ್ತಿದೆ. ಈ ತಿಂಗಳ ಆರಂಭದಲ್ಲಿ ಔಷಧಿಗೆ ಅನುಮತಿ ನೀಡುವಂತೆ ಡಿ.ಸಿ.ಜಿ.ಐ. ಬಳಿ ಕ್ಯಾಡಿಲಾ ಮನವಿ ಮಾಡಿಕೊಂಡಿತ್ತು. ಈ ಮನವಿಗೆ ಅನುಮತಿ ದೊರೆತಿದೆ ಎಂದು ಜೈಡಸ್ ಕ್ಯಾಡಿಲಾ ತಿಳಿಸಿದೆ. ಹೆಪಟೈಟಿಸ್ ಬಿ ಹಾಗೂ ಸಿ ರೋಗಿಗಳಿಗೆ ಹಲವಾರು ವರ್ಷಗಳಿಂದ ಪೆಗ್‌ಐಎಫ್‌ಎನ್ ಔಷಧಿ ಬಳಸುತ್ತಾ ಬರಲಾಗುತ್ತಿದೆ. ಈ ಔಷಧಿಯಿಂದ ಕೊರೊನಾ ರೋಗಿಗಳು ಶೀಘ್ರವಾಗಿ ಚೇತರಿಸಿಕೊಳ್ಳುತ್ತಾರೆ ಹಾಗೂ ರೋಗ ಸಂಕೀರ್ಣ ಸ್ವರೂಪ ಪಡೆಯುವುದು ತಪ್ಪುತ್ತದೆ ಎಂದು ಜೈಡಸ್ ಕ್ಯಾಡಿಲಾ ತಿಳಿಸಿದೆ.


ಹುಟ್ಟುಹಬ್ಬ – ಸ್ಮರಣೆ



ದಿ|| ಐಗೂರು ಬಿ. ರೇವಣಸಿದ್ದಪ್ಪ
ನಿವೃತ್ತ ಮುಖ್ಯೋಪಾಧ್ಯಾಯರು, ದಾವಣಗೆರೆ.

(ಜನನ : ದಿನಾಂಕ 24.04.1929)
ನಿಮ್ಮ ಹುಟ್ಟುಹಬ್ಬದ ಈ ಶುಭ ಸಂದರ್ಭದಲ್ಲಿ ಸದಾ ನಿಮ್ಮ ಸ್ಮರಣೆಯಲ್ಲಿರುವ...

ಸಹೋದರ : ಐಗೂರು ಬಿ. ಜಯಪ್ಪ & ಮಕ್ಕಳು ಭೂ ದಾಖಲೆ ಇಲಾಖೆ
ಮಕ್ಕಳಾದ : ಶ್ರೀಮತಿ, ಶ್ರೀ ಬಿ.ಆರ್. ಶಿವಕುಮಾರ್, ಬೆಂಗಳೂರು.,
ಶ್ರೀಮತಿ, ಶ್ರೀ ಬಿ.ಆರ್. ನಾಗರಾಜ್, ಬೆಂಗಳೂರು.
ಶ್ರೀಮತಿ, ಶ್ರೀ ಐಗೂರು ಬಿ.ಆರ್. ವಿಜಯಕುಮಾರ್
ನಂದಿನಿ ಮಿಲ್ಕ್ ಏಜೆಂಟ್, ರಿಯಲ್‌ಎಸ್ಟೇಟ್, ದಾವಣಗೆರೆ.

ಮೊಮ್ಮಕ್ಕಳು, ಬೂದಿಹಾಳ್ ವಂಶಸ್ಥರು, ಮತ್ತು ಬಂಧು-ಮಿತ್ರರು ಹಾಗೂ ಐಗೂರು ಗ್ರಾಮಸ್ಥರು.





ಜನ್ಮ ದಿನದ ಶುಭಾಶಯಗಳು

HAPPY BIRTHDAY

ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರೂ ಹಾಗೂ ನಮ್ಮ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳೂ ಆದ

ಶ್ರೀ ಡಿ.ವಿ. ಜಯರುದ್ರಪ್ಪ

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಅವರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುವ...

ಶುಭ ಕೋರುವವರು :
ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರುಗಳು
ಪ್ರತಿಭಾ ಅನ್ವೇಷಣೆ (ರಿ) ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆ



ಅಶ್ರುತರ್ಪಣ



ದಿನಾಂಕ 23.04.2021ರಂದು ನಿಧನರಾದ ದಾವಣಗೆರೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎ. ಗೋವಿಂದರೆಡ್ಡಿ ಅವರ ಧರ್ಮಪತ್ನಿ ಮತ್ತು ನಂದಿಗಾವಿ ಹಾಲು ಉತ್ಪಾದಕರ ಮಹಿಳಾ ಸಂಘದ ಸಂಸ್ಥಾಪಕ ಅಧ್ಯಕ್ಷರಾದ

ಶ್ರೀಮತಿ ಸುಧಾ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಶ್ರೀಮತಿ ಜಯಮ್ಮ, ತಿ. ದೊಡ್ಡಯಂಕಣ್ಣನವರ ಹಾಗೂ ಮಕ್ಕಳು, ಹೊಸವೀರಾಪುರ
- ಶ್ರೀಮತಿ ಗೌರಮ್ಮ, ವೆಂ. ದೊಡ್ಡಯಂಕಣ್ಣನವರ ಹಾಗೂ ಮಕ್ಕಳು, ಹೊಸವೀರಾಪುರ.
- ಶ್ರೀಮತಿ ಜಯಮ್ಮ ಮತ್ತು ಶ್ರೀ ನಾರಾಯಣ ದೊಡ್ಡಯಂಕಣ್ಣನವರ ಹಾಗೂ ಮಕ್ಕಳು, ಹೊಸವೀರಾಪುರ
- ಶ್ರೀಮತಿ ಶೋಭಾ ಮತ್ತು ಶ್ರೀ ಬಾಲಚಂದ್ರರೆಡ್ಡಿ ದೊಡ್ಡಯಂಕಣ್ಣನವರ ಹಾಗೂ ಮಕ್ಕಳು, ಹೊಸವೀರಾಪುರ
- ಶ್ರೀಮತಿ ಸುಜಾತ ಮತ್ತು ಡಾ|| ಧರ್ಮರೆಡ್ಡಿ ದೊಡ್ಡಯಂಕಣ್ಣನವರ ಹಾಗೂ ಮಕ್ಕಳು, ರವಿ ನರ್ಸಿಂಗ್ ಹೋಂ, ದಾವಣಗೆರೆ.
- ಶ್ರೀಮತಿ ಗೀತಾ ಮತ್ತು ಶ್ರೀ ವಾಸುದೇವರೆಡ್ಡಿ ದೊಡ್ಡಯಂಕಣ್ಣನವರ ಹಾಗೂ ಮಕ್ಕಳು, ದಾವಣಗೆರೆ.
- ಶ್ರೀಮತಿ ಸರೋಜಮ್ಮ ಮತ್ತು ಶ್ರೀ ಎಲ್.ಹೆಚ್. ಪಾಟೀಲ ಹಾಗೂ ಮಕ್ಕಳು, ಹೊಸವೀರಾಪುರ.
- ಶ್ರೀಮತಿ ವಿಜಯ ಮತ್ತು ಡಾ|| ಕೆ. ಶ್ರೀನಿವಾಸರೆಡ್ಡಿ ಹಾಗೂ ಮಕ್ಕಳು, ರವಿ ನರ್ಸಿಂಗ್ ಹೋಂ, ದಾವಣಗೆರೆ.
- ಶ್ರೀಮತಿ ಯಶೋಧ ಮತ್ತು ಶ್ರೀ ಕೆ. ರಾಜಗೋಪಾಲರೆಡ್ಡಿ ಹಾಗೂ ಮಕ್ಕಳು, ನಂದಿ ಇಂಡಸ್ಟ್ರೀಸ್, ದಾವಣಗೆರೆ.
- ಶ್ರೀಮತಿ ಆಶಾ ಮತ್ತು ಡಾ|| ಕೆ. ರವಿಕುಮಾರ ಹಾಗೂ ಮಕ್ಕಳು, ರವಿ ನರ್ಸಿಂಗ್ ಹೋಂ, ದಾವಣಗೆರೆ.
- ಶ್ರೀಮತಿ ಭಾನುಮತಿ ಮತ್ತು ಶ್ರೀ ಕೆ. ಶಶಿಧರ ಹಾಗೂ ಮಕ್ಕಳು, ದಾವಣಗೆರೆ.
- ಶ್ರೀಮತಿ ಮಂಜುಳಾ ಮತ್ತು ಶ್ರೀ ಮಂಜುನಾಥ ಅಕ್ಕೇರ ಹಾಗೂ ಮಕ್ಕಳು, ಬೆಂಗಳೂರು.
- ನಂದಿಗಾವಿ ಹಾಗೂ ಹೊಸವೀರಾಪುರದ ಬಂಧುಗಳು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte